ಐಕ್ಯರಂಗ

(ವಾರ ಪತ್ರಿಕೆ)

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 44 ನವೆಂಬರ್ 7, 1982 ಬೆಲೆ 60 ಪೈಸೆ

ನವೆಂಬರ್ ೮ ರಿಂದ ೧೧ ರವರೆಗೆ ಮಿಡ್ನಾಪುರದಲ್ಲಿ

ಅಖಿಲ ಭಾರತ ರೈತ ಸಮ್ಮೇಳನ

ಅಖಿಲ ಭಾರತ ಕಿಸಾನ್ ಸಭಾದ 24ನೇ ಅಖಿಲ ಭಾರತ ಸಮ್ಮೇಳನವು ಪಶ್ಚಿಮ ಬಂಗಾಳದ ಮಿಡ್ನಾಪುರದಲ್ಲಿ ನವೆಂಬರ್ 8 ರಿಂದ 11ರವರೆಗೆ ನಡೆಯಲಿದೆ. ಅಖಿಲ ಭಾರತ ಕಿಸಾನ್ ಸಭೆಗೆ ಸೇರ್ಪಡೆಯಾಗಿರುವ ಕರ್ನಾಟಕ ಪ್ರಾಂತ ರೈತ ಸಂಘದ ಪ್ರತಿನಿಧಿಗಳು ಈ ಅಖಿಲ ಭಾರತ ರೈತ ಸಮ್ಮೇಳನಕ್ಕೆ ಭಾಗವಹಿಸಲು 4-11-82 ರಂದು ಬೆಂಗಳೂರಿನಿಂದ ತೆರಳಿದರು.

ಒಟ್ಟು 15 ಜನ ಪ್ರತಿನಿಧಿಗಳು ಹಾಗೂ ಇಬ್ಬರು ವೀಕ್ಷಕರು ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ.

4-11-82 ರಂದು ಬೆಂಗಳೂರಿನಲ್ಲಿ ಸೇರಿದ್ದ ರಾಜ್ಯ ಕಾರ್ಯಕಾರಿ ಸಮಿತಿಯ ಸಭೆ ಕೆಳಗಿನ ನಿರ್ಣಯವನ್ನು ಕೈಗೊಂಡಿದೆ :—

1. ಸರಕಾರಕ್ಕೆ ಕೊನೆಯ ಎಚ್ಚರಿಕೆ ನೀಡುವ ಅಂಗವಾಗಿ ಮನವಿಗೆ ದಶಲಕ್ಷ ಸಹಿ ಸಂಗ್ರಹಿಸುವ ಕಾರ್ಯಕ್ರಮವನ್ನು ಹಲವು ತಿಂಗಳುಗಳಿಂದ ಕರ್ನಾಟಕ ಪ್ರಾಂತ ರೈತ ಸಂಘ ಕೈಗೊಂಡಿದ್ದು ತುಂಬಾ ಯಶಸ್ವೀ ರೀತಿಯಲ್ಲಿ ನಡೆಯುತ್ತಿದೆ. ಹೀಗೆ ದಶ ಲಕ್ಷ ಸಹಿ ಸಂಗ್ರಹಿಸಿದ ಮನವಿಯನ್ನು ಸರಕಾರಕ್ಕೆ ನೀಡಲು ಡಿಸೆಂಬರ್ 13 ರಂದು ರಾಜ್ಯದ ರೈತರ, ರೈತ ಕೂಲಿಕಾರರ ವಿಧಾನ ಸೌಧ ರ್‍ಯಾಲಿಯನ್ನು ತುಂಬಾ ಯಶಸ್ವೀ ರೀತಿಯಲ್ಲಿ ಸಂಘಟಿಸುವುದೆಂದೂ, ರಾಜ್ಯದ ಎಲ್ಲ ಜಿಲ್ಲೆಗಳಿಂದಲೂ ಮುಖ್ಯವಾಗಿ ರೈತರಲ್ಲದೆ ಬಡ ರೈತರು, ಕೂಲಿಕಾರರು ಸಹ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮಾಡುವುದೆಂದೂ ತೀರ್ಮಾನಿಸಿದೆ.

ಕರ್ನಾಟಕ ಪ್ರಾಂತ ರೈತ ಸಂಘವು ಸೆಪ್ಟೆಂಬರ್‌ನಲ್ಲಿ ನಡೆಸಬೇಕಿದ್ದ ವಿಧಾನ ಸೌಧ ರ್‍ಯಾಲಿಯನ್ನು ಮುಂದೂಡಲಾಗಿತ್ತು. ದಶಲಕ್ಷ ಸಹಿ ಸಂಗ್ರಹಿಸುವ ಕೆಲಸ ಸಂಪೂರ್ಣಗೊಳಿಸುವ ಉದ್ದೇಶದಿಂದ ಈ ರೀತಿ ಮಾಡಲಾಗಿತ್ತು. ಈ ಮಧ್ಯೆ ರುದ್ರಪ್ಪನವರ ನೇತೃತ್ವದ ರೈತ ಸಂಘವು ಅಕ್ಟೋಬರ್ 2 ರಂದು ವಿಧಾನ ಸೌಧ ರ್‍ಯಾಲಿಯನ್ನು ನಡೆಸಿದೆ. ಕರ್ನಾಟಕ ಪ್ರಾಂತ ರೈತ ಸಂಘ ಹಾಕಿಕೊಂಡಿರುವ ಈ ಡಿಸೆಂಬರ್ 13ರ ವಿಧಾನ ಸೌಧ ರ್‍ಯಾಲಿ ಅದಕ್ಕೆ ಪ್ರತಿಸ್ಪರ್ಧಿ ರ್‍ಯಾಲಿ ಅಲ್ಲ. ಬದಲು ರಾಜ್ಯ ರೈತರ, ರೈತ ಕೂಲಿಕಾರರ ಬೇಡಿಕೆಗಳನ್ನು ಹೆಚ್ಚು ಅಧಿಕೃತವಾಗಿಯೂ ಸಾರ್ವತ್ರಿಕವಾಗಿಯೂ, ಪ್ರತಿನಿಧಿಸುವುದು. ಮುಖ್ಯವಾಗಿ ಬಡ ರೈತರ ಮತ್ತು ಕೂಲಿಕಾರರ ಸಮಸ್ಯೆಗಳನ್ನು ಹೆಚ್ಚು ಒತ್ತುಕೊಟ್ಟು ಎತ್ತಿತೋರಿಸುವ ಉದ್ದೇಶ ಹೊಂದಿರುತ್ತದೆ.

ಇಂದು ರೈತರ, ರೈತ ಕೂಲಿಕಾರರ ಐಕ್ಯ ಹೋರಾಟವನ್ನು ಕಟ್ಟುವುದು ಅವಶ್ಯವಿದ್ದು ಕರ್ನಾಟಕ ಪ್ರಾಂತ ರೈತ ಸಂಘವು ರಾಜ್ಯದಲ್ಲಿ ರೈತ ಸಂಘಟನೆಗಳನ್ನು ಸಂಯುಕ್ತ ರೀತಿಯಲ್ಲಿ ಐಕ್ಯ ಹೋರಾಟವನ್ನು ರೂಪಿಸಿಕೊಳ್ಳಲು ಮನವಿಮಾಡಿಕೊಳ್ಳುತ್ತದೆ.

○

ಚಿರಾಯುವಾಗಲಿ

ನವೆಂಬರ್ 7, 1917 ಜಗತ್ತಿನ ಕಾರ್ಮಿಕ ವರ್ಗಕ್ಕೆ ಅತ್ಯಂತ ಪ್ರಿಯವಾದ ದಿನ. ಅಂದು ಜಗತ್ತಿನ ಆರನೇ ಒಂದು ಭಾಗವಾದ ರಷ್ಯಾ ದೇಶದ ದುಡಿಯುವ ಜನತೆ ಕಾರ್ಮಿಕ ವರ್ಗದ ನೇತೃತ್ವದಲ್ಲಿ ಅಲ್ಲಿ ಆಳುತ್ತಿದ್ದ ಬಂಡವಾಳಶಾಹಿ—ಭೂಮಾಲಿಕ ವರ್ಗದ ಆಡಳಿತೆಯನ್ನು ಕೊನೆಗೊಳಿಸಿ ರೈತ-ಕಾರ್ಮಿಕರ ಕ್ರಾಂತಿಯನ್ನು ಯಶಸ್ವಿಯಾಗಿಮಾಡಿ ಹೊಸ ಸಮಾಜವನ್ನು ನಿರ್ಮಿಸಿತು. ಕಾಮ್ರೇಡ್ ಲೆನಿನ್‌ರವರ ಮಾರ್ಗದರ್ಶನದಲ್ಲಿ ಅಲ್ಲಿಯ ಬೋಲ್ಷೆವಿಕ್ (ಕಮ್ಯೂನಿಸ್ಟ್) ಪಾರ್ಟಿ ಸರಿಯಾದ ನಿಲುವನ್ನು ಅನುಸರಿಸಿಕೊಂಡು ಬಂದು, ರೈತ-ಕಾರ್ಮಿಕ ವರ್ಗವನ್ನು ಸಂಘಟಿಸಿ ಕ್ರಾಂತಿಯನ್ನು ಯಶಸ್ವಿಗೊಳಿಸಿತು. ಶೋಷಣೆ ಇಲ್ಲದ ಹೊಸ ಸಮಾಜ ರಚನೆಯು ಸಾಧ್ಯವೆಂಬುದನ್ನು ಜಗತ್ತಿಗೆ ರಷ್ಯದ ಕ್ರಾಂತಿ ಸಾರಿತು.

ಕ್ರಾಂತಿಕಾರಿ ಸರ್ಕಾರವನ್ನು ಸೋಲಿಸಲು ರಷ್ಯದ ಪ್ರತಿಗಾಮಿ ಶಕ್ತಿಗಳೂ, ಅಂತರ ರಾಷ್ಟ್ರೀಯ ಬಂಡವಾಳಶಾಹಿಗಳೂ ಶತಪ್ರಯತ್ನ ಮಾಡಿದರೂ ಅವೆಲ್ಲ ವಿಫಲಗೊಂಡುವು. ಇದಕ್ಕೆ ಸೋವಿಯತ್ ರಷ್ಯದ ಜನತೆಯ ಸ್ಫೂರ್ತಿದಾಯಕ ಹೋರಾಟವೂ, ಅದಕ್ಕೆ ಅಂತರ ರಾಷ್ಟ್ರೀಯ ಕಾರ್ಮಿಕ ವರ್ಗದ

ಸಂಪಾದಕೀಯ :

ಬೆಂಬಲವೂ ದೊರಕಿತ್ತು. ಹೊಸ ಕ್ರಾಂತಿಕಾರಿ ಸರ್ಕಾರ ಎಲ್ಲ ಪಟ್ಟಭದ್ರ ಹಿತಾಸಕ್ತಿಗಳನ್ನೂ ಯಶಸ್ವಿಯಾಗಿ ಎದುರಿಸಿಕೊಂಡು ಸಮಾಜವಾದಿ ಸಮಾಜವನ್ನು ರಚಿಸಿತು.

ಎಲ್ಲರಿಗೂ ಉದ್ಯೋಗ, ಶಿಕ್ಷಣ ಸೌಲಭ್ಯ, ಉಚಿತ ವೈದ್ಯಕೀಯ ಸೌಲಭ್ಯ, ವಸತಿ ಸೌಕರ್ಯ, ಮಕ್ಕಳ ಪಾಲನೆ ಮುಂತಾದ ಕ್ರಮಗಳನ್ನು ಕೈಗೊಂಡು ಆರ್ಥಿಕ ಅಭಿವೃದ್ಧಿಗೆಬೇಕಾದ ಎಲ್ಲ ಕ್ರಮಗಳನ್ನು ಕೈಗೊಂಡಿತು. ಸೋವಿಯತ್‌ಗಳ ಮೂಲಕ ದುಡಿಯುವ ಜನತೆಯ ಹೊಸ ಪ್ರಜಾಪ್ರಭುತ್ವದ ಕಲ್ಪನೆಯನ್ನು ಜಗತ್ತಿಗೆ ತೋರಿಸಿತು. ಬಂಡವಾಳಶಾಹಿ ದೇಶಗಳ ಅಸಹಕಾರಗಳನ್ನೆಲ್ಲಾ ಎದುರಿಸಿ, ಕೈಗಾರಿಕೆ, ವ್ಯವಸಾಯ, ಶಿಕ್ಷಣ ಮೊದಲಾದ ಎಲ್ಲ ಕ್ಷೇತ್ರಗಳಲ್ಲೂ ಅಭಿವೃದ್ಧಿಗೊಂಡು ಮುಂದುವರಿಯಿತು. ಇದರ ಪರಿಣಾಮವಾಗಿ ಎರಡನೇ ಮಹಾಯುದ್ಧದಲ್ಲಿ ಫ್ಯಾಸಿಸ್ಟ್ ಶಕ್ತಿಗಳನ್ನು ಸೋಲಿಸಲು ಸೋವಿಯತ್ ಸರ್ಕಾರಕ್ಕೆ ಸಾಧ್ಯವಾಯಿತು. ಈ ಯುದ್ಧದಲ್ಲಿ ರಷ್ಯಾದ ಜನತೆ ಅಪಾರ ಕಷ್ಟ ನಷ್ಟಗಳನ್ನು ಅನುಭವಿಸಬೇಕಾಯಿತು. ಯೂರೋಪಿನ ಇತರ ಬಂಡವಾಳಶಾಹಿ ಸರಕಾರಗಳೆಲ್ಲಾ ಒಂದೊಂದಾಗಿ ಸೋತಾಗ ಸೋವಿಯತ್ ರಷ್ಯಾ ಹಿಟ್ಲರನ ದಾಳಿಯನ್ನು ಎದುರಿಸಿ ಸಮಾಜವಾದಿ ಸಮಾಜದ ಶಕ್ತಿಯನ್ನು ಪ್ರದರ್ಶಿಸಿತು. ಪರಿಣಾಮವಾಗಿ ಪೂರ್ವ ಯೂರೋಪ್ ರಾಷ್ಟ್ರಗಳು ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೊಗೆದು ಸಮಾಜವಾದಿ ವ್ಯವಸ್ಥೆಯನ್ನು ರಚಿಸಲು ಸಾಧ್ಯವಾಯಿತು. ಬರ್ಲಿನ್‌ನಿಂದ ಮಾಸ್ಕೋವರೆಗೆ ಸಮಾಜವಾದಿ ವ್ಯವಸ್ಥೆ ಅಸ್ತಿತ್ವಕ್ಕೆ ಬರಲು ಸಾಧ್ಯವಾಯಿತು. ನಂತರ ಚೀನದಲ್ಲೂ 1949ರಲ್ಲಿ ಕ್ರಾಂತಿಯಾಗಿ ಜಗತ್ತಿನ ಮೂರನೇ ಒಂದು ಭಾಗದಲ್ಲಿ ಸಮಾಜವಾದ ಬರಲು ಸಾಧ್ಯವಾಯಿತು.

(8ನೇ ಪುಟ ನೋಡಿ)

ನವೆಂಬರ್ ೧೨ ರಿಂದ ವಿರೋಧಪಕ್ಷಗಳ ನೇತೃತ್ವದಲ್ಲಿ

ವಿಧಾನ ಸೌಧದೆದುರು ಸರದಿ ಉಪವಾಸ ಸತ್ಯಾಗ್ರಹ

ರಾಜ್ಯದ ಆರು ಪ್ರಮುಖ ರಾಜಕೀಯ ಪಕ್ಷಗಳು ಅಕ್ಟೋಬರ್ 12 ರಂದು ಮುಖ್ಯ ಮಂತ್ರಿಗೆ ಕೆಲವು ಬೇಡಿಕೆಗಳ ಪಟ್ಟಿ ಸಲ್ಲಿಸಿ, ಒಂದು ವಾರದಲ್ಲಿ ನಿರ್ಧಾರ ತಿಳಿಸಲು ಕೋರಿದ್ದವು (ವಿವರ ಅಕ್ಟೋಬರ್ 17ರ ಐಕ್ಯರಂಗ ನೋಡಿ).

ನಿರೀಕ್ಷಿಸಿದಂತೆಯೇ ಗುಂಡೂರಾಯರು ಈ ಬೇಡಿಕೆಗಳ ಬಗ್ಗೆ ಉದ್ಧಟತನದ ಮಾತನ್ನು ಆಡಿದ್ದಾರೆ.

4-11-82 ರಂದು ಸಿ. ಪಿ. ಐ., ಸಿ. ಪಿ. ಐ. (ಎಂ), ಜನತ, ಕ್ರಾಂತಿ ರಂಗ, ಕಾಂಗ್ರೆಸ್ (ಎಸ್) ಮತ್ತು ಬಿ. ಜೆ. ಪಿ. ಗಳ ನಾಯಕರು ಸಭೆ ಸೇರಿ, ಬೇಡಿಕೆಗಳಿಗಾಗಿ ಸರಕಾರವನ್ನು ಒತ್ತಾಯಿಸಲು ನವೆಂಬರ್ 12 ರಿಂದ 22ರವರೆಗೆ ವಿಧಾನ ಸೌಧದೆದುರು ಸರದಿ ಉಪವಾಸ ಸತ್ಯಾಗ್ರಹ ನಡೆಸಲು ತೀರ್ಮಾನಿಸಿದ್ದಾರೆ. 12 ರಂದು ಸರದಿ ಉಪವಾಸ ಸತ್ಯಾಗ್ರಹದಲ್ಲಿ ವಿರೋಧ ಪಕ್ಷಗಳ ನಾಯಕರು ಪಾಲ್ಗೊಳ್ಳಲಿರುವರು.

ಈ ಕಾರ್ಯಕ್ರಮದ ಅಂಗವಾಗಿ ದಿನಾಂಕ 13 ರಂದು ಬೆಂಗಳೂರಿನ ನ್ಯಾಷನಲ್ ಹೈಸ್ಕೂಲ್ ಮೈದಾನದಲ್ಲಿ ವಿರೋಧ ಪಕ್ಷಗಳ ಜಂಟಿ ಆಶ್ರಯದಲ್ಲಿ ಭಾರೀ ಬಹಿರಂಗ ಸಭೆ ನಡೆಯಲಿದೆ. ಅಲ್ಲದೆ ಈ ಅವಧಿ (ನವೆಂಬರ್ 11 ರಿಂದ 22)ಯಲ್ಲಿ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಈ ಬೇಡಿಕೆಗಳಿಗಾಗಿ ಒತ್ತಾಯಿಸಿ ಬಹಿರಂಗ ಸಭೆ, ಮೆರವಣಿಗೆ, ಧರಣಿ ಸತ್ಯಾಗ್ರಹ ನಡೆಸಲು ವಿರೋಧ ಪಕ್ಷಗಳ ಜಿಲ್ಲಾ ಘಟಕಗಳಿಗೆ ಕರೆ ಕೊಡಲಾಗಿದೆ.

4-11-82 ರಂದು ನಡೆದ ಸಭೆಯಲ್ಲಿ ಜನತಾದ ಶ್ರೀ ಎಸ್. ಆರ್. ಬೊಮ್ಮಾಯಿ, ಲಕ್ಷ್ಮೀಸಾಗರ್, ವಿ. ಎಸ್. ಕೃಷ್ಣಅಯ್ಯರ್ ಹಾಗೂ ಚಂದ್ರಶೇಖರ್, ಕ್ರಾಂತಿರಂಗದ ಎಂ. ಸಿ. ಪೆರುಮಾಳ್, ಹುಚ್ಚಮಾಸ್ತಿಗೌಡ, ರಘುಪತಿ, ಚಂದ್ರೇಗೌಡ, ಸಿ.ಪಿ.ಐ.ನ ಕಾಂ| ಎಂ.ಎಸ್.ಕೃಷ್ಣನ್, ಪಿ. ರಾಮನ್ ಮತ್ತು ಕಾಂ| ಎಂ. ಸಿ. ವೆಂಕಟ್ರಾವ್, ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಕಾಂ| ಸೂರ್ಯನಾರಾಯಣರಾವ್ ಹಾಗೂ ಕಾಂ| ಪಿ. ಕೆ. ಸುಬ್ರಮಣಿ, ಕಾಂಗ್ರೆಸ್ (ಎಸ್)ನ ಹನುಮಂತಪ್ಪ ಮತ್ತು ಬಿ. ಜೆ. ಪಿ. ಧುರೀಣರು ಭಾಗವಹಿಸಿದ್ದರು.

ಬೇಡಿಕೆಗಳು :

(1) ಕೆ.ಜಿ.ಎಫ್., ಮಳವಳ್ಳಿ, ಬೆಂಗಳೂರು ಮತ್ತು ದೊಡ್ಡಹಳ್ಳಿಗಳಲ್ಲಿ ನಡೆದ ಪೋಲೀಸ್ ಗೋಲಿಬಾರ್ ಬಗ್ಗೆ ನ್ಯಾಯಾಂಗ ತನಿಖೆ ನಡೆಸಬೇಕು;

(2) ಸಾರ್ವಜನಿಕ ಉದ್ದಿಮೆ ವಲಯಗಳ ಕಾರ್ಮಿಕರ ಮುಷ್ಕರ, ರೈತ ಚಳುವಳಿ, ವಿದ್ಯಾರ್ಥಿ ಚಳುವಳಿ ಮತ್ತು ಭಾಷಾ ಸತ್ಯಾಗ್ರಹಗಳಲ್ಲಿ ಹೂಡಿರುವ ಎಲ್ಲಾ ಪೋಲೀಸ್ ಮೊಕದ್ದಮೆಗಳನ್ನು ವಾಪಸ್ ಪಡೆಯಬೇಕು;

(3) ಸರ್ಕಸ್ ದುರಂತಕ್ಕೆ ಸಂಬಂಧಿಸಿದ ಮತ್ತಿತರ ಆಯೋಗಗಳ, ರೋಲರ್ ಫ್ಲೋರ್ ಮಿಲ್ ಲೈಸೆನ್ಸ್‌ಗಳಿಗೆ ಸಂಬಂಧಿಸಿದ ಸಿ. ಬಿ. ಐ. ವರದಿ, 'ಕೆಲಸಕ್ಕಾಗಿ ಆಹಾರ' ಯೋಜನೆ ಸಿ. ಓ. ಡಿ. ವರದಿ ಮುಂತಾದವುಗಳನ್ನು ಬಹಿರಂಗಪಡಿಸಬೇಕು;

(8ನೇ ಪುಟ ನೋಡಿ)

ಸಾರ್ವಜನಿಕ ಕ್ಷೇತ್ರದ ನೌಕರರ ಸಮಾವೇಶದ ಗೊತ್ತುವಳಿ

[ಅಕ್ಟೋಬರ್ 12, 13, 1982 ರಂದು ಹೈದ್ರಾಬಾದಿನಲ್ಲಿ ನಡೆದ ಸಾರ್ವಜನಿಕ ಕ್ಷೇತ್ರದ ಉದ್ಯಮಗಳ ನೌಕರರ ಸಂಘಗಳ ಅಖಿಲ ಭಾರತ ಸಮಾವೇಶದಲ್ಲಿ ಅಂಗೀಕರಿಸಿದ ಗೊತ್ತುವಳಿ.]

ದೇಶದಾದ್ಯಂತ ಕಾರ್ಮಿಕ ಸಂಘಟನೆಯ ಚಳುವಳಿಯ ಮೇಲೆ ಮತ್ತು ದುಡಿಯುವ ವರ್ಗದ ಮೇಲೆ ಹೆಚ್ಚುತ್ತಿರುವ ದಾಳಿಯನ್ನು ಕುರಿತು ಅಕ್ಟೋಬರ್ 12, 13 ರಂದು ಹೈದ್ರಾಬಾದಿನಲ್ಲಿ ನಡೆದ ಸಾರ್ವಜನಿಕ ಕ್ಷೇತ್ರದ ಕಾರ್ಮಿಕ ಸಂಘಗಳ ಅಖಿಲ ಭಾರತ ಸಮಾವೇಶವು ತನ್ನ ತೀವ್ರ ಕಳವಳವನ್ನು ವ್ಯಕ್ತಪಡಿಸುತ್ತದೆ. ಒಂದೆಡೆ ಕಾರ್ಮಿಕರ ಸಂಘಟನೆಯ ಹಕ್ಕನ್ನು ಕಾನೂನುಗಳ ಮೂಲಕ ಮೊಟಕುಗೊಳಿಸುತ್ತಿದ್ದರೆ ಇನ್ನೊಂದೆಡೆ ಸಾರ್ವತ್ರಿಕವಾಗಿ ವೇತನ ಸ್ಥಗಿತವನ್ನು ದುಡಿಯುವ ವರ್ಗದ ಮೇಲೆ ಹೇರುವ ಪ್ರಯತ್ನ ನಡೆದಿದೆ. ಕಾರ್ಮಿಕರ ಹಕ್ಕಾದ ಸಾಮೂಹಿಕ ಚೌಕಾಸಿ ಮತ್ತು ಮುಷ್ಕರದ ಹಕ್ಕನ್ನು ಕಡೆಗಣಿಸಲಾಗಿದೆ. ಮತ್ತು ಗುಪ್ತ ಮತದಾನದ ಮೂಲಕ ಸಂಘಕ್ಕೆ ಅಂಗೀಕಾರದ ಹಕ್ಕನ್ನು ನಿರಾಕರಿಸಲಾಗಿದೆ. ಹಣದುಬ್ಬರ ಮತ್ತು ಅಧಿಕ ಬೆಲೆಗಳ ನೀತಿಯಿಂದಾಗಿ ಕಾರ್ಮಿಕ ವರ್ಗದ ಜೀವನ ಮಟ್ಟ ಕುಸಿಯುತ್ತಿರುವಾಗ ಇಡೀ ಕೈಗಾರಿಕಾ ಸಂಭಂಧವನ್ನು ವಿಕೃತಗೊಳಿಸಲಾಗಿದೆ.

ಸರ್ಕಾರದ ಕಾರ್ಮಿಕ ವಿರೋಧಿ ನೀತಿಯ ವಿರುದ್ಧ ಜೂನ್ 4, 1981 ರಂದು ಬೊಂಬಾಯಿಯಲ್ಲಿ ನಡೆದ ಅಖಿಲ ಭಾರತ ಸಮಾವೇಶವು ಸರ್ಕಾರದ ಭೂ ಮಾಲೀಕ, ಏಕಸ್ವಾಮ್ಯ ಹಾಗೂ ಬಹುರಾಷ್ಟ್ರೀಯ ಸಂಸ್ಥೆಗಳ ಪರವಾದ ನೀತಿಯಿಂದಾಗಿ ದುಡಿಯುವ ವರ್ಗ ಮತ್ತು ಬಡ ಜನತೆ ದಾಳಿಗೆ ಒಳಗಾಗಿದ್ದು ಅವುಗಳ ವಿರುದ್ಧ ಧೀರ್ಘ ಹೋರಾಟ ಮಾಡಬೇಕಾಗಿ ಸೂಚಿಸಿತ್ತು. ನವೆಂಬರ್ 23, 1981 ರಂದು ಸಂಸತ್ತಿನ ಮುಂದೆ ನಡೆಸಿದ ಪ್ರದರ್ಶನ ಮತ್ತು ಜನವರಿ 19, 1982 ರಂದು ಒಂದು ದಿನದ ಅಖಿಲ ಭಾರತ ಮುಷ್ಕರಗಳ ಮೂಲಕ ಕಾರ್ಮಿಕ ವರ್ಗ ತನ್ನ ವಿರೋಧವನ್ನು ಪ್ರದರ್ಶಿಸಿತು. ಇವುಗಳಲ್ಲಿ ರೈತನ ಬೆಳೆಗೆ ನ್ಯಾಯವಾದ ಬೆಲೆ ಮತ್ತು ಕೃಷಿ ಕಾರ್ಮಿಕರಿಗೆ ಉತ್ತಮ ವೇತನಗಳ ಬೇಡಿಕೆಯನ್ನೂ ಮುಂದಿಡಲಾಯಿತು.

ವಿಶೇಷ ದಾಳಿಗೆ ಗುರಿ

ಇತ್ತೀಚಿನ ಹೊಸ ಕಾರ್ಮಿಕ ಶಾಸನಗಳನ್ನು ಕುರಿತಂತೆ ಪೂರ್ವಭಾವಿಯಾಗಿ ಕಾರ್ಮಿಕ ಸಂಘಗಳೊಡನೆ ಚರ್ಚಿಸಲು ಸರ್ಕಾರ ನಿರಾಕರಿಸಿದ್ದರಿಂದಾಗಿ ರಾಷ್ಟ್ರೀಯ ಆಂದೋಲನ ಸಮಿತಿಯು ಸೆಪ್ಟೆಂಬರ್ 17—18 ರಂದು ನಡೆದ ರಾಷ್ಟ್ರೀಯ ತ್ರಿಪಕ್ಷೀಯ ಸಮ್ಮೇಳನವನ್ನು ಬಹಿಷ್ಕರಿಸಬೇಕಾಯಿತು. ಅಲ್ಲದೆ ಐ. ಎಂ. ಎಫ್. ಸಾಲದ ಷರತ್ತುಗಳಿಗನುಗುಣವಾಗಿ ಸರ್ಕಾರವು ಕಾರ್ಮಿಕ ಹೋರಾಟವನ್ನು ತೀವ್ರವಾಗಿ ದಮನಗೊಳಿಸುತ್ತಿದೆ. ಅನೇಕ ಸಂದರ್ಭಗಳಲ್ಲಿ ಶ್ರಮ ಉಳಿತಾಯದ ತಾಂತ್ರಿಕ ಕ್ರಮಗಳಿಂದಾಗಿ ಸಾರ್ವಜನಿಕ ಕ್ಷೇತ್ರದ ಉದ್ಯಮಗಳಲ್ಲಿ ಉದ್ಯೋಗದ ಅವಕಾಶಗಳನ್ನು ಕಡಿತಗೊಳಿಸಲಾಗುತ್ತಿದೆ.

ನಮ್ಮ ಆರ್ಥಿಕ ವ್ಯವಸ್ಥೆಯಲ್ಲಿ ಸಾರ್ವಜನಿಕ ಕ್ಷೇತ್ರದ ಪರಿಕಲ್ಪನೆಯನ್ನು ಬೆಂಬಲಿಸಿದ ಈ ಕ್ಷೇತ್ರದ ಕಾರ್ಮಿಕರೇ ದಾಳಿಗೆ ವಿಶೇಷವಾಗಿ ತುತ್ತಾಗಿದ್ದಾರೆ. ಈ ಉದ್ಯಮಗಳಲ್ಲಿನ ನೌಕರಷಾಹಿ, ತಪ್ಪು ಆರ್ಥಿಕ ನೀತಿ ಮತ್ತು ಲಂಚದ ಹಾವಳಿಯಿಂದಾಗಿ ಭಾರಿ ನಷ್ಟದಲ್ಲಿ ನಡೆಯುತ್ತಿವೆ. ನಮ್ಮಲ್ಲಿ ಉತ್ಪಾದಿಸುವ ವಸ್ತುಗಳನ್ನೇ ಆಮದು ಮಾಡಿಕೊಳ್ಳುವುದು, ದೇಶಿಯ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲು ವಿಫಲವಾಗಿರುವುದು ಮತ್ತು ವಿದೇಶಿ ಸಹಯೋಗದ ಯೋಜನೆಗಳ ಮೇಲೆ ಅತಿಯಾದ ಅವಲಂಬನೆಯಿಂದಾಗಿ ನಮ್ಮ ಕಾಲ ಮೇಲೆ ನಿಲ್ಲುವ ಆಸೆ ಭಗ್ನವಾಗಿದೆ. ಆದರೆ ಇದಕ್ಕೆಲ್ಲ ಕಾರ್ಮಿಕ ವರ್ಗವನ್ನು ದೂಷಿಸುತ್ತ ಅಧಿಕ ವೇತನ ಪಡೆಯುವರೆಂಬ ನೆಪದೊಂದಿಗೆ ಅವರ ಎಲ್ಲ ನ್ಯಾಯಯುತ ಬೇಡಿಕೆಗಳನ್ನು ತಳ್ಳಿಹಾಕಲಾಗುತ್ತಿದೆ.

ಸಾರ್ವಜನಿಕ ಕ್ಷೇತ್ರದಲ್ಲಿ ಕಾಂಟ್ರಾಕ್ಟ್ ಕಾರ್ಮಿಕರ ಸ್ಥಿತಿ ಚಿಂತಾಜನಕವಾಗಿದ್ದು ಕಂಟ್ರಾಕ್ಟರುಗಳ ಮತ್ತು ಲಂಚಕೋರ ಅಧಿಕಾರಿಗಳ ಅನುಕೂಲಕ್ಕಾಗಿ ಅವರುಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ನವದೆಹಲಿಯ 'ಏಷ್ಯಾಡ್' ಯೋಜನೆಯಂತಹ ಕಡೆಯಲ್ಲಿ ದುಡಿಯುತ್ತಿರುವ ಕಟ್ಟಡ ಕಾರ್ಮಿಕರಿಗೂ ಸುಪ್ರೀಂ ಕೋರ್ಟು ನಿರ್ದೇಶಿಸಿರುವ ಕನಿಷ್ಠ ವೇತನವೂ ಸಿಗುತ್ತಿಲ್ಲ, ಆಡಳಿತ ವರ್ಗ ಮತ್ತು ಪೋಲಿಸರ ಸಹಕಾರದೊಂದಿಗೆ ಕಲ್ಲಿದ್ದಲು ಗಣಿಗಳಲ್ಲಿ ಮಾಫಿಯಾ ಗುಂಪುಗಳು ಭಯೋತ್ಪಾದಕವಾಗಿ ವರ್ತಿಸುತ್ತಿವೆ.

ಏಕಪಕ್ಷೀಯ ನಿರ್ಭಂದಗಳು

ಅನೇಕ ಉದ್ಯಮಗಳಲ್ಲಿ ವೇತನ ಇತ್ಯರ್ಥಕ್ಕೆ ಸರ್ಕಾರವು ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್ (ಬಿ.ಪಿ.ಇ.) ಮೂಲಕ ಏಕ ಪಕ್ಷೀಯವಾಗಿ ನಿರ್ಭಂದಗಳನ್ನು ಹೇರಿ ಅಡ್ಡಿಯುಂಟುಮಾಡುತ್ತಿರುವುದನ್ನು ಸಮಾವೇಶವು ಗಣನೆಗೆ ತೆಗೆದುಕೊಳ್ಳುತ್ತದೆ. ಈ ನಿರ್ಭಂದಗಳ ಅನ್ವಯ ಹೆಚ್ಚುವರಿ ವೇತನಕ್ಕೆ ಅಧಿಕ ಉತ್ಪಾದನೆಯನ್ನು ಜೋಡಿಸಲಾಗಿದೆ ಮತ್ತು ಪೂರ್ವಾನ್ವಯವಾಗುವಂತೆ ಯಾವುದೇ ವೇತನ ಒಪ್ಪಂದವನ್ನು ಮಾಡಿಕೊಳ್ಳುವಂತಿಲ್ಲ. ಒಪ್ಪಂದದಿಂದಾದ ವೇತನ ಹೆಚ್ಚಳ ಸದ್ಯದ ವೇತನ ವೆಚ್ಚದ ಶೇಖಡ 10 ಅನ್ನು ಮೀರಬಾರದು, 1960ನ್ನು ಮೂಲ ವರ್ಷವನ್ನಾಗಿಸಿಕೊಂಡು ಸೂಚ್ಯಾಂಕದ ಪ್ರತಿ ಪಾಯಿಂಟ್ ಹೆಚ್ಚಳಕ್ಕೆ ರೂ. 1-30ನ್ನು ಮಾತ್ರ ತುಟ್ಟಿ ಭತ್ಯೆಕೊಡಬೇಕು. ಮತ್ತು ಇಂತಹ ಒಪ್ಪಂದಗಳನ್ನು ನಾಲ್ಕು ವರ್ಷಗಳ ಅವಧಿಗೆ ಮಾಡಿಕೊಳ್ಳಬೇಕು.

ಬಿ. ಪಿ. ಇ. ಯ ಈ ನಿರ್ದೇಶನಗಳು ಸಾರ್ವಜನಿಕ ಕ್ಷೇತ್ರದ ವೇತನ ಮಾತುಕತೆಗಳಲ್ಲಿ ನೇರವಾಗಿ ತಲೆ ಹಾಕುವುಲ್ಲದೆ ಇವೆಲ್ಲವುಗಳನ್ನು ಜಾರಿಗೆ ತಂದಿದ್ದೇ ಆದರೆ ಸಾಮೂಹಿಕ ಚೌಕಾಶಿಗೆ ಯಾವುದೇ ಅವಕಾಶವೂ ಇರುವುದಿಲ್ಲ.

ಈ ನಿರ್ದೇಶನಗಳಿಂದಾಗಿ ಇಂಡಿಯನ್ ಆಯಿಲ್, ಉಕ್ಕು, ಬಿ. ಎಚ್. ಇ. ಎಲ್. ಮುಂತಾದವುಗಳಲ್ಲಿ ವೇತನ ಮಾತುಕತೆಗಳಲ್ಲಿ ಯಾವುದೇ ಪ್ರಗತಿ ಸಾಧಿಸಿಲ್ಲ. ಬೆಂಗಳೂರು ಮತ್ತು ಹೈದ್ರಾಬಾದಿನಲ್ಲಿನ I. T. I., H.M.T., H.A.L. BEML, B.E.L., E.C.I.L., B.O.L. ಮತ್ತು ರಸಾಯನಿಕ ಗೊಬ್ಬರ ಕೈಗಾರಿಕೆಗಳಲ್ಲಿ ಹಿಂದಿನ ಒಪ್ಪಂದ ಡಿಸೆಂಬರ್ 31, 1982ಕ್ಕೆ ಮುಗಿಯುತ್ತಿದ್ದು ವೇತನ ಕುರಿತಾದ ಮಾತುಕತೆಗಳು ಇನ್ನೂ ಪ್ರಾರಂಭವಾಗಬೇಕಾಗಿದೆ. ಹಿಂದೂಸ್ಥಾನ ಟೆಲಿಪ್ರಿಂಟರ್ಸ್, ಮೆಕಾನ್, ಸೆಂಟ್ರಲ್ ಎಲೆಕ್ಟ್ರಾನಿಕ್ಸ್ ಮುಂತಾದವುಗಳಲ್ಲಿ ಬಿ.ಪಿ.ಇ.ನಿಂದಾಗಿ ಒಪ್ಪಂದಗಳು ಸ್ಥಗಿತಗೊಂಡಿವೆ. ಕಲ್ಲಿದ್ದಲು ಕೈಗಾರಿಕೆಯಲ್ಲಿ ಜಂಟೀ ದ್ವಿಪಕ್ಷೀಯ ಸಮಿತಿಯನ್ನು ಇಂಟಕ್ (ಐ)ಗೆ ಅನುಕೂಲವಾಗುವಂತೆ ಪುನರ್ ರಚಿಸುವ ನಿರ್ಧಾರ ಮತ್ತು ಹಿಂದಿನ ಒಪ್ಪಂದವನ್ನು ಜಾರಿಗೊಳಿಸದಿರುವುದರಿಂದಾಗಿ ಮಾತುಕತೆಗಳು ಸ್ಥಗಿತಗೊಂಡಿವೆ. ಸಾಮಾನ್ಯ ಹಾಗೂ ಜೀವ ವಿಮೆ ಕೈಗಾರಿಕೆಯಲ್ಲಿ ಶಾಸನದ ಮೂಲಕ ನೌಕರರ ಹಕ್ಕನ್ನು ಕಿತ್ತುಗೊಂಡಿದೆ.

ಬಿ ಪಿ ಇ ಯನ್ನು ರದ್ದುಗೊಳಿಸಿ

ಬಿ. ಪಿ. ಇ. ಸೂತ್ರದನ್ವಯ ಈಗಾಗಲೇ ಪಾಯಿಂಟ್‌ಗೆ ರೂ. 1-30ಕ್ಕಿಂತ ಹೆಚ್ಚು ಪಡೆಯುತ್ತಿರುವ ಕೆಲಸಗಾರರು ರೂ. 1-30 ತುಟ್ಟಿಭತ್ಯೆಕ್ಕೆ ಒಪ್ಪದೆ ವೇತನ ಹೆಚ್ಚಳ ಪಡೆಯುವಂತಿಲ್ಲ. ದೆಹಲಿ ಟ್ರಾನ್ಸ್‌ಪೋರ್ಟ್ ಕಾರ್ಪೋರೇಷನ್ ಕಾರ್ಮಿಕ ಸಂಘಗಳು ಮತ್ತು ಆಡಳಿತ ವರ್ಗ ಪೆನ್‌ಷನ್ ಯೋಜನೆಯನ್ನು ರೂಪಿಸಿದ್ದರೂ ಬಿ. ಪಿ. ಇ. ಅನುಮತಿ ನೀಡುತ್ತಿಲ್ಲ. ಎಚ್. ಎಸ್. ಸಿ. ಎಲ್. ನಲ್ಲಿ ಏಕ ಪಕ್ಷೀಯವಾಗಿ ಅಧಿಕ ತುಟ್ಟಿಭತ್ಯೆವನ್ನು ಅಮಾನತು ಮಾಡಲಾಯಿತು. ನೌಕರರು ಇದನ್ನು ಪ್ರತಿಭಟಿಸಿದಾಗ ತಾತ್ಕಾಲಿಕ ಪರಿಹಾರ ವೇತನವನ್ನೂ ನಿಲ್ಲಿಸಲಾಯಿತು.

ಒಂದುವೇಳೆ ವೇತನ ಹೆಚ್ಚಳ ಒಪ್ಪಂದಕ್ಕೆ ಬಂದರೂ ಪಾಯಿಂಟಗೆ ರೂ. 1-30ರ ತುಟ್ಟಿ ಭತ್ಯೆಯಿಂದಾಗಿ ವೇತನದಲ್ಲಿ ನಿರಂತರ ಕೊರತೆವುಂಟಾಗುತ್ತದೆ. ಹೀಗೆ ಬಿ. ಪಿ. ಇ. ಯ ಕೈವಾಡದಿಂದಾಗಿ ಎಲ್ಲ ದ್ವಿಪಕ್ಷೀಯ ಮಾತುಕತೆಯ ಮಾರ್ಗಗಳು ಅರ್ಥ ಕಳೆದುಕೊಳ್ಳುತ್ತವೆ. ಆದ್ದರಿಂದ ಎಲ್ಲ ಕಾರ್ಮಿಕ ಸಂಘಗಳು ಬಿ. ಪಿ. ಇ. ಯನ್ನು ರದ್ದುಗೊಳಿಸುವಂತೆ ಧ್ವನಿಯೆತ್ತಿವೆ.

ಕಲ್ಲಿದ್ದಲು, ಉಕ್ಕು, ಬಿ.ಎಚ್.ಇ.ಎಲ್.ನಲ್ಲಿ ಯಶಸ್ವಿಯಾದ ಸಮಾವೇಶವನ್ನು ನಡೆಸಿ ಜಂಟೀ ಕಾರ್ಯಕ್ರಮ ಮತ್ತು ಚಳುವಳಿಯನ್ನು ರೂಪಿಸಿಕೊಂಡಿರುವುದನ್ನು ಈ ಸಮಾವೇಶ ಸ್ವಾಗತಿಸುತ್ತದೆ.

ಬಿ. ಪಿ. ಇ. ವಿರುದ್ಧ ಎಲ್ಲ ಕೇಂದ್ರ ಕಾರ್ಮಿಕ ಸಂಘಗಳ ಪ್ರಚಾರದಿಂದಾಗಿ ಇಂಟಕ್ ನಾಯ್ಕತ್ವವೂ ಇದರ ವಿರುದ್ಧ ಧ್ವನಿ ಎತ್ತಿದೆ. ಆದರೆ ಜಂಟೀ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ನಿರಾಕರಿಸುತ್ತಿದೆ.

ನಿರ್ದೇಶನಗಳ ವಿರುದ್ಧ ಹೋರಾಟ

ಬಿ. ಪಿ. ಇ. ಮೂಲಕ ಸರ್ಕಾರವು ಏಕ ಪಕ್ಷೀಯವಾಗಿ ತನ್ನ ವೇತನ ನೀತಿಯನ್ನು ಹೇರುವುದನ್ನು ಈ ಸಮಾವೇಶವು ಖಂಡಿಸುತ್ತದೆ. ಪಾಯಿಂಟ್‌ಗೆ ರೂ. 1-30 ತುಟ್ಟಿ ಭತ್ಯವನ್ನು ಒಳಗೊಂಡಂತೆ ಬಿ. ಪಿ. ಇ. ಯ ಯಾವುದೇ ನಿರ್ದೇಶನವನ್ನು ಹೇರುವ ಒಪ್ಪಂದಕ್ಕೆ ಸಹಿ ಮಾಡದಂತೆ ಸಾರ್ವಜನಿಕ ಕ್ಷೇತ್ರದ ಎಲ್ಲ ಕಾರ್ಮಿಕ ಸಂಘಗಳಿಗೂ ಈ ಸಮಾವೇಶ ಕರೆ ನೀಡುತ್ತದೆ. ಈ ನಿರ್ದೇಶನಗಳ ವಿರುದ್ಧ ಹೋರಾಡುವಂತೆ ಮತ್ತು ಜಂಟೀ ಹೋರಾಟಕ್ಕೆ ತಯಾರಿ ನಡೆಸುವಂತೆ ಎಲ್ಲ ಕಾರ್ಮಿಕರಿಗೂ ಕರೆ ನೀಡುತ್ತದೆ. ಆಗ ಮಾತ್ರ ಸರ್ಕಾರ ಮತ್ತು ಬಿ.ಪಿ.ಇ. ನ ಕುತಂತ್ರಗಳನ್ನು ಸೋಲಿಸಬಹುದು.

ನವೆಂಬರ್ 8, 1982 ರಂದು ಒಂದು ದಿನದ ಮುಷ್ಕರಕ್ಕೆ ನಿರ್ಧಾರ ಕೈಗೊಂಡಿರುವ ಏಳು ಲಕ್ಷ ಕಲ್ಲಿದ್ದಲು ಗಣಿ ಕಾರ್ಮಿಕರನ್ನು ಈ ಸಮಾವೇಶ ಅಭಿನಂದಿಸುವುದಲ್ಲದೆ ಅವರ ಎಲ್ಲ ಬೇಡಿಕೆಗಳನ್ನು ಬೆಂಬಲಿಸುತ್ತದೆ.

ಮುಷ್ಕರಕ್ಕೆ ಸಿದ್ಧಗೊಳಿಸಿ

ಈ ಹೋರಾಟ ಅತ್ಯಂತ ಕ್ಲಿಷ್ಟಕರವಾಗಿದ್ದು ಸಾರ್ವಜನಿಕ ಕ್ಷೇತ್ರದ ಎಲ್ಲ ಕಾರ್ಮಿಕರು ಒಂದು ದಿನದ ಮುಷ್ಕರಕ್ಕೆ ಸಿದ್ಧತೆ ಪ್ರಾರಂಭಿಸಬೇಕು. ಸರ್ಕಾರ ತನ್ನ ನೀತಿಯನ್ನು ಬದಲಾಯಿಸುವಂತೆ ಆಗಬೇಕಾದರೆ ಅಖಿಲ ಭಾರತ ಮಟ್ಟದಲ್ಲಿ ಸಾಧಿಸಿರುವ ಈ ಐಕ್ಯತೆಯನ್ನು ಧೀರ್ಘ ಮತ್ತು ವ್ಯವಸ್ಥಿತ ಹೋರಾಟಕ್ಕೆ ಅನುಕೂಲವಾಗುವಂತೆ ಕೆಳಗಿನ ಎಲ್ಲ ಹಂತಗಳಿಗೂ ಕೊಂಡೊಯ್ಯಬೇಕು. ಮುಷ್ಕರದ ದಿನವನ್ನು ನಿಗದಿಪಡಿಸಲು ಈ ಸಮಾವೇಶವು ರಾಷ್ಟ್ರೀಯ ಪ್ರಚಾರ ಸಮಿತಿಗೆ ಅಧಿಕಾರ ನೀಡುತ್ತದೆ.

ಏಕಸ್ವಾಮ್ಯ ಹಾಗೂ ಬಹುರಾಷ್ಟ್ರೀಯ ಸಂಸ್ಥೆಗಳಿಗೆ ಅನುಕೂಲವಾಗುವಂತೆ ಕಾರ್ಮಿಕ ವರ್ಗದ ಹಕ್ಕುಗಳ ಮೇಲೆ ದಾಳಿ ಮಾಡುತ್ತಿರುವ ಸರ್ಕಾರದ ನೀತಿಯನ್ನು ಎದುರಿಸಲು ಮತ್ತು ಬಿ. ಪಿ. ಇ. ಮಾರ್ಗದರ್ಶನವನ್ನು ಸೋಲಿಸಲು ಕಾರ್ಮಿಕ ವರ್ಗ ತೀವ್ರವಾಗಿ ಪ್ರತಿಭಟಿಸಬೇಕೆಂದು ಈ ಸಮಾವೇಶ ಕರೆ ನೀಡುತ್ತದೆ. ಇದೇ ಸಂದರ್ಭದಲ್ಲಿ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಹೋರಾಟಕ್ಕೆ ಬೆಂಬಲ ನೀಡಬೇಕೆಂದು ಖಾಸಗಿ ಕ್ಷೇತ್ರದ ಕಾರ್ಮಿಕರು ಮತ್ತು ಕಾರ್ಮಿಕ ಸಂಘಟನೆಗಳಿಗೆ ಈ ಸಮಾವೇಶ ಮನವಿ ಮಾಡಿಕೊಳ್ಳುತ್ತದೆ.

ಸರ್ಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಸೋಲಿಸಲು ಮತ್ತು ಅಗತ್ಯತೆಯನ್ನಾಧರಿಸಿದ ವೇತನವನ್ನು ಪಡೆದುಕೊಳ್ಳಲು ಭಾರತದ ಕಾರ್ಮಿಕ ವರ್ಗ ಕಾಲದ ಕರೆಗೆ ಓಗೊಡುತ್ತದೆಂದು ಈ ಸಮಾವೇಶಕ್ಕೆ ದೃಢವಾದ ನಂಬಿಕೆಯಿದೆ

●

ಚಿಂತಾಮಣಿ :

ಯುವಜನರ ಸಭೆ

ಡಿ. ವೈ ಎಫ್. ಐ. ನೂತನ ಘಟಕವನ್ನು ಆರಂಭಿಸುವ ಉದ್ದೇಶದಿಂದ 20-10—82 ರಂದು ಚಿಂತಾಮಣಿಯಲ್ಲಿ ಯುವಜನರ ಸಭೆಯೊಂದು ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ಘಟಕದ ಅಧ್ಯಕ್ಷ ಕಾಂ। ಪಿ. ಶ್ರೀನಿವಾಸ್ ವಹಿಸಿದ್ದರು. ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಕಾಂ। ಜಿ. ವಿ. ಶ್ರೀರಾಮರೆಡ್ಡಿ ಮತ್ತು ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಕಾಂ। ಕೆ. ವಿ. ಸತ್ಯನಾರಾಯಣ ಅವರು ಅತಿಥಿಗಳಾಗಿ ಆಗಮಿಸಿದ್ದರು.

ಕಾಂ। ಶ್ರೀರಾಮರೆಡ್ಡಿಯವರು ಸಭೆಯನ್ನುದ್ದೇಸಿ ಮಾತನಾಡಿ, ಡಿ. ವೈ. ಎಫ್. ಐ. ಧ್ಯೇಯೋದ್ದೇಶಗಳನ್ನು ವಿವರಿಸಿದರು. ನಂತರ ಕೆ. ವಿ. ಪಿ. ಸ್ವಾಮಿ, ಟಿ. ಆಂಜಪ್ಪ, ಬಯ್ಯಾರೆಡ್ಡಿ ಮತ್ತು ಎಂ. ವಿ. ಶ್ರೀನಿವಾಸರೆಡ್ಡಿ ಇವರುಗಳು ಸಂಚಾಲಕರಾಗುಳ್ಳ ಸಂಘಟನಾ ಸಮಿತಿಯೊಂದನ್ನು ಚುನಾಯಿಸಲಾಯಿತು.

●

[ಸಮಾಜವಾದದ ಇತಿಹಾಸದಲ್ಲಿ ಅಕ್ಟೋಬರ್ ಕ್ರಾಂತಿಯು ಒಂದು ನವೋದಯವನ್ನೇ ಆರಂಭಿಸಿತು. ಝಾರನ ಕಪಿ ಮುಷ್ಟಿಯಲ್ಲಿ ನಲುಗಿ ನುಗ್ಗಾದ ಜನತೆ ಝಾರಶಾಹಿಯನ್ನು ಕಿತ್ತೆಸೆಯಿತು. ಪ್ರಭುತ್ವದ ಕೋಟೆಗಳು ಕುಸಿದು ಬಿದ್ದವು. ಶತಮಾನಗಳಿಂದ ರಶಿಯದ ಜನತೆಯನ್ನು ನಿಗ್ರಹಿಸಿಟ್ಟಿದ್ದ ನಿರಂಕುಶ ಅಧಿಕಾರವನ್ನು ಜನತೆ ತೊಡೆದು ಹಾಕಿತು. ಝಾರನ ದಮನಕಾರಿ ಆಡಳಿತದಿಂದ ಬಹಳಕಾಲ ಕಾದಿದ್ದ ಬಿಡುಗಡೆ ನವೆಂಬರ್ 7 ರಂದು ಕೈಗೂಡಿತ್ತು.

ಈ ಮಹಾನ್ ಅಕ್ಟೋಬರ್ ಕ್ರಾಂತಿಯು ಬಂಡವಾಳಶಾಹಿ ವ್ಯವಸ್ಥೆಯು ಶಾಶ್ವತವೆಂದುಕೊಂಡಿದ್ದ ಆಳುವ ವರ್ಗಗಳ ಕಲ್ಪನೆಯನ್ನು ನುಚ್ಚುನೂರು ಮಾಡಿತು. ಬಂಡವಾಳಶಾಹಿ ಸರಪಳಿ ಮೊಟ್ಟ ಮೊದಲ ಬಾರಿಗೆ ಕಳಚಿಬಿತ್ತು.

ರಶಿಯಾದ ವಿಜಯಿಯಾದ ದುಡಿಯುವ ವರ್ಗದ ಕ್ರಾಂತಿಯು ವಿವಿಧ ದೇಶಗಳ ರಾಷ್ಟ್ರೀಯ ಹೋರಾಟಗಳ ಮೇಲೆ ಅಪಾರ ಪರಿಣಾಮ ಬೀರಿತು. ವಸಾಹತು ಮತ್ತು ಅರೆ ವಸಾಹತು ದೇಶಗಳಲ್ಲಿ ಹೋರಾಡುತ್ತಿದ್ದ ಕ್ರಾಂತಿಕಾರಿಗಳಿಗೆ ಅಕ್ಟೋಬರ್ ಕ್ರಾಂತಿಯು ಮಾರ್ಗದರ್ಶಿಯಾಯಿತು.

ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಗಳೆದುರು ಜನತೆ ಹೋರಾಟ ನಡೆಸುತ್ತಿದ್ದ ಕಾಲಘಟ್ಟದಲ್ಲಿ ನಡೆದ ಅಕ್ಟೋಬರ್ ಕ್ರಾಂತಿಯು, ಸ್ವಾತಂತ್ರ್ಯ ಹೋರಾಟದ ಮೇಲೆ ಯಾವ ಪರಿಣಾಮ ಬೀರಿತೆಂಬುದರ ಕುರಿತಾದ ಕಾಂ| ಇ ಎಂ. ಎಸ್. ಅವರ ಲೇಖನವನ್ನಿಲ್ಲಿ ಪ್ರಕಟಿಸುತ್ತಿದ್ದೇವೆ].



"ಬಂಡವಾಳಶಾಹಿ ಪದ್ಧತಿಯ ಕಾಲದ ದಾಖಲೆಗಳು ಮತ್ತು ಸ್ಮಾರಕಗಳನ್ನು ತಮ್ಮ ಮೊಮ್ಮಕ್ಕಳು ಅಶ್ಚರ್ಯದಿಂದ ಏವೆಯಿಕ್ಕದೇ ನೋಡುವುವು. ಜೀವನದ ಅತ್ಯಗತ್ಯ ವಸ್ತುಗಳ ವ್ಯಾಪಾರ ಖಾಸಗಿಯವರ ಕೈಯಲ್ಲಿರಲು ಹೇಗೆ ಸಾಧ್ಯವಾಗಿತ್ತು? ಕಾರ್ಖಾನೆಗಳು ಮತ್ತು ಯಂತ್ರಗಳು ವ್ಯಕ್ತಿಗಳ ಒಡೆತನದಲ್ಲಿರಲು ಹೇಗೆ ಸಾಧ್ಯವಾಗಿತ್ತು? ಒಬ್ಬ ಮನುಷ್ಯ ಮತ್ತೊಬ್ಬ ಮನುಷ್ಯನನ್ನು ಶೋಷಿಸಲು ಹೇಗೆ ಸಾಧ್ಯವಾಗಿತ್ತು? ಎಂಬುದನ್ನು ತಮ್ಮ ಮನಸ್ಸಿನಲ್ಲಿ ಚಿತ್ರಿಸಿಕೊಳ್ಳಲು ಆ ಮಕ್ಕಳಿಗೆ ತುಂಬ ಕಷ್ಟವಾಗುವುದು. ನಮ್ಮ ಮಕ್ಕಳು ಕಾಣಲಿರುವ ವಿಚಾರಗಳನ್ನು ಈವರೆಗೆ ಕಟ್ಟು ಕಥೆಗಳಂತೆ ಹೇಳಲಾಗುತ್ತಿತು."

"ಆದರೆ ಈಗ ಕಾಮ್ರೇಡುಗಳೇ!, ನಾವು ಈಗ ಸಮಾಜವಾದಿ ಸಮಾಜದ ಸೌಧಕ್ಕಾಗಿ ಹಾಕಿರುವ ಬುನಾದಿಯು ಕೇವಲ ಕಾಲ್ಪನಿಕವಲ್ಲವೆಂಬುದನ್ನು ನೀವು ಸ್ಪಷ್ಟವಾಗಿ ಕಾಣುತ್ತಿದ್ದೀರಿ. ಈ ಸೌಧದ ನಿರ್ಮಾಣದಲ್ಲಿ ನಮ್ಮ ಮಕ್ಕಳು ಇನ್ನೂ ಹೆಚ್ಚು ಸತ್ವಶಾಲಿಗಳಾಗಿರುತ್ತಾರೆ."

—ಲೆನಿನ್

(1919ರ ಮೇ ಒಂದರಂದು ಜನತೆಯನ್ನುದ್ದೇಶಿಸಿ ಮಾಡಿದ ಭಾಷಣದಿಂದ)

ನವೆಂಬರ್ ಕ್ರಾಂತಿಯ ನಂತರದ ಭಾರತ

ಈ ನವೆಂಬರ್ 7ಕ್ಕೆ, ಜಗತ್ತಿನ ಪ್ರಥಮ ಸಮಾಜವಾದಿ ಕ್ರಾಂತಿಗೆ— ಮಹಾನ್ ಅಕ್ಟೋಬರ್ ರಷ್ಯನ್ ಕ್ರಾಂತಿಗೆ 65 ವರ್ಷಗಳು ತುಂಬುತ್ತದೆ.

ಒಂದು ದೇಶದಲ್ಲಿ ಉಂಟಾಗುವ ಕ್ರಾಂತಿಯು ತನ್ನ ದೇಶದಲ್ಲಷ್ಟೆ ಪರಿಣಾಮಗಳನ್ನುಂಟು ಮಾಡುವುದಿಲ್ಲ. ಬದಲಾಗಿ ಇಡೀ ಜಗತ್ತು ಅದರಿಂದ ಪ್ರಭಾವಿತಗೊಳ್ಳುತ್ತದೆ ಎಂಬುದು ಇಂದು ಎಲ್ಲರಿಗೂ ಸ್ಪಷ್ಟವಾಗಿ ಅರಿವಾಗಿರುವ ವಿಚಾರ. ವಿಶ್ವದ ಒಟ್ಟು ಜನಸಂಖ್ಯೆಯ ಅರ್ಧದಷ್ಟು ಜನರು ವಾಸಿಸುವ ಭೂಮಿಯ ಒಂದು ದೊಡ್ಡ ಭೂಭಾಗದಲ್ಲಿ ಒಂದು ಹೊಸ ಸಮಾಜ ವ್ಯವಸ್ಥೆ ಜನ್ಮ ತಾಳಿದೆ. ಚರಿತ್ರೆಯ ಉಳಿದೆಲ್ಲ ಕ್ರಾಂತಿಗಿಂತಲೂ ಹೆಚ್ಚಿನ ಪ್ರಮಾಣದ ಪ್ರಭಾವವನ್ನು ಮಾನವ ಜನಾಂಗದ ಜೀವನದ ಮೇಲೆ ಉಂಟು ಮಾಡಿದ ಕ್ರಾಂತಿ ಇದಾಗಿದೆ.

ಇತರ ದೇಶಗಳ ಮೇಲೆ ಮತ್ತು ಜಗತ್ತಿನ ಇತರ ಬೇರೆ ಭಾಗಗಳ ಮೇಲೆ ಅಕ್ಟೋಬರ್ ಕ್ರಾಂತಿಯ ಪ್ರಭಾವವನ್ನು ಪಕ್ಕಕ್ಕಿಟ್ಟು ನಮ್ಮ ದೇಶದ ಮೇಲೆಯೇ ಒಂದು ಸೂಕ್ಷ್ಮ ನೋಟ ಹರಿಸೋಣ. ಈ 65 ವರ್ಷಗಳ ಅವಧಿಯಲ್ಲಿ ನಮ್ಮ ದೇಶದಲ್ಲಿ ಘಟಿಸಿರುವ ಸಾಮಾಜಿಕ–ರಾಜಕೀಯ ಬದಲಾವಣೆಗಳು ಚಾರಿತ್ರಿಕ ಪ್ರಾಮುಖ್ಯತೆಯುಳ್ಳವುಗಳಾಗಿವೆ.

ರಷ್ಯದ ಕಾರ್ಮಿಕ ವರ್ಗ ತನ್ನ ರೈತ ಬಾಂಧವರೊಂದಿಗೆ ಲೆನಿನ್ ನಾಯಕತ್ವದ ಬೊಲ್ಷೆವಿಕ್ ಪಾರ್ಟಿಯ ಮುಂಚೂಣಿಯಲ್ಲಿ ಊಳಿಗಮಾನ್ಯ ಜಮೀನ್ದಾರಿ ಪ್ರಭುತ್ವವನ್ನು, ಝಾರ್‌ನ ನಿರಂಕುಶ ಪ್ರಭುತ್ವ ಮತ್ತು ಬಂಡವಾಳಶಾಹಿಯನ್ನು ಕಿತ್ತೊಗೆದು ಜಗತ್ತಿನ ಪ್ರಪ್ರಥಮ ಕಾರ್ಮಿಕರ ಮತ್ತು ರೈತರ ಪ್ರಭುತ್ವವನ್ನು ಸ್ಥಾಪಿಸಿದ ಕಾಲದಲ್ಲಿ ಬ್ರಿಟೀಷ್ ವಸಾಹತುಶಾಹಿ ಆಡಳಿತಗಾರರು ಭಾರತದಲ್ಲಿ ಭದ್ರವಾಗಿ ಕುಳಿತಿದ್ದರು. ರಷ್ಯದ ಈ ಚರಿತ್ರಾರ್ಹ ಘಟನೆಯ ಸಂದೇಶ ವಿಶಾಲವಾದ ಸಂಚಾರವನ್ನಾರಂಭಿಸಿತು.

ಜಗತ್ತಿನ ಉಳಿದ ಭಾಗಗಳಂತೆಯೇ ಭಾರತದಲ್ಲೂ ಕೂಡ ಎಲ್ಲ ವಿಭಾಗಗಳ ಜನತೆಯು ಜಗತ್ತನ್ನೇ ನಡುಗಿಸಿದ ಘಟನೆಯಿಂದ ಸ್ಫೂರ್ತಿ ಪಡೆದರು. ವಿದೇಶಿಯರ ವಸಾಹತು ಆಡಳಿತವನ್ನು ಕಿತ್ತೆಸೆಯಲು ಸಾಧ್ಯವೆಂಬ ವಿಶ್ವಾಸವನ್ನು ಗಳಿಸಿದರು. ಅಕ್ಟೋಬರ್ ಕ್ರಾಂತಿಯ ನಂತರದ ಒಂದೆರಡು ವರ್ಷಗಳಲ್ಲೇ ಭಾರತದಲ್ಲಿ ಬ್ರಿಟೀಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ರಾಷ್ಟ್ರವ್ಯಾಪೀ ಸಾಮೂಹಿಕ ಚಳುವಳಿಯು ಆರಂಭವಾಯಿತು. ಈ ಚಳುವಳಿಯ ನೇತೃತ್ವವನ್ನು ಬಂಡವಾಳಶಾಹೀ ಪಕ್ಷ ಮತ್ತು ಅದರ ಪ್ರಭಾವೀ ನಾಯಕರ ನೇತೃತ್ವದಲ್ಲಿ ನಡೆಯಿತೆಂಬುದರಲ್ಲಿ ಸಂಶಯವಿಲ್ಲ. ಆದರೆ ಮಿಲಿಯ ಗಟ್ಟಲೆ ದುಡಿಯುವ ಜನರನ್ನು ಚಳುವಳಿ ಆಕರ್ಷಿಸಿತು.

ಬ್ರಿಟೀಷ್ ಆಡಳಿತಗಾರರು ನಿಸ್ಸಂಶಯವಾಗಿಯೂ ಹೊಸ ಸಾಮೂಹಿಕ ಪ್ರತಿಭಟನೆಯನ್ನು ತುಳಿಯಲು, ಜನತಾ ಚಳುವಳಿಯನ್ನು ರಕ್ತದಲ್ಲಿ ಮುಳುಗಿಸಲು ಎಲ್ಲಾ ಶಕ್ತಿಗಳನ್ನೂ, ಮೂಲಗಳನ್ನೂ ಬಳಸಿಕೊಂಡರು. ಇದರ ಮೊದಲ ಸೂಚನೆ ಕುಪ್ರಸಿದ್ಧ ಜಾಲಿಯನ್ ವಾಲಾಭಾಗ್ ಹತ್ಯಾಕಾಂಡ. ಇಂತಹುದೇ ರೀತಿಯ ದಮನಗಳು 1920-21ರ ಅಸಹಕಾರ ಚಳುವಳಿ; 1930-31ರ ಉಪ್ಪಿನ ಸತ್ಯಾಗ್ರಹ; 1942ರ ಕ್ವಿಟ್ ಇಂಡಿಯಾ ಚಳುವಳಿ— ಈ ಮುಂತಾದ ಸಾಮ್ರಾಜ್ಯಶಾಹಿ ವಿರೋಧೀ ಹೋರಾಟಗಳಲ್ಲಿ ಪುನರಾವರ್ತನೆಗೊಂಡವು.

ಪ್ರತಿಯೊಂದು ಸಾಮೂಹಿಕ ಚಳುವಳಿ ಮತ್ತು ಹೋರಾಟಗಳು ಲಕ್ಷಗಟ್ಟಲೆಜನರನ್ನು ಕ್ರಿಯೆಗಿಳಿಸುತ್ತಿದ್ದವು. ಆದರೆ ಅವು ಸಾಮ್ರಾಜ್ಯಶಾಹಿಗಳ ಕ್ರೂರದಬ್ಬಾಳಿಕೆಗೆಬಲಿಯಾಗುತ್ತಿದ್ದವು. ನೂರಾರು ಮಂದಿ ಹುತಾತ್ಮರಾಗುತ್ತಿದ್ದರು. ಇಂಥ ಪ್ರತಿಯೊಂದು ಹೋರಾಟವೂ ಭಾರತದ ಹೋರಾಟಗಾರರ ಒಗ್ಗಟ್ಟನ್ನು ಬಲಪಡಿಸುತ್ತಿದ್ದವು.

ಇವೆಲ್ಲದರ ಪರಿಣಾಮವಾಗಿ ಅಕ್ಟೋಬರ್ ಕ್ರಾಂತಿಯ ಮೂರು ದಶಕಗಳೊಳಗಾಗಿಯೇ ಬ್ರಿಟೀಷರು ಸ್ವಾತಂತ್ರ ಚಳುವಳಿಯ ಬೂರ್ಷ್ವಾ ನಾಯಕತ್ವದೊಂದಿಗೆ ಒಪ್ಪಂದಕ್ಕೆ ಬರಬೇಕಾಯಿತು.

ಮತ್ತಿತರ ನಗರ ಹಾಗೂ ಗ್ರಾಮಾಂತರ ಪ್ರದೇಶಗಳ ಬಡಜನತೆಯ ವಿಭಾಗಗಳ ಸಂಘಟನೆಗಳು, ಮಧ್ಯಮ ವರ್ಗದ ನೌಕರರ ಸಂಘಟನೆಗಳು, ಎಲ್ಲಕ್ಕಿಂತ ಮುಖ್ಯವಾಗಿ ರಾಜಕೀಯ ಸಂಸ್ಥೆಗಳು ಮತ್ತು ಪಕ್ಷಗಳು ಸಮಾಜವಾದೀ ಸಿದ್ಧಾಂತದ ಆಧಾರದ ಮೇಲೆ ರೂಪುಗೊಂಡವು. ಇವು ಸ್ವಾತಂತ್ರ್ಯ ಚಳುವಳಿಯ ಬೂರ್ಷ್ವಾ ನಾಯಕತ್ವಕ್ಕೆ ಸಂಘಟಿತ ಸೈದ್ಧಾಂತಿಕ ಮತ್ತು ರಾಜಕೀಯ ಸವಾಲಾಗಿ ಪರಿಣಮಿಸಿತು.

ಈ ಹೊಸ ಶಕ್ತಿಯು ಸಮರಶೀಲ ಹೋರಾಟಗಳ ಮೂಲಕ ಸ್ವಾತಂತ್ರ್ಯ ಚಳುವಳಿಯ ಬೂರ್ಷ್ವಾ ನಾಯಕತ್ವವನ್ನು ಅಲುಗಿಸತೊಡಗಿತು. ಇದು ಎರಡನೆಯ ಮಹಾಯುದ್ಧದ ಕೊನೆಯ ವೇಳೆಗೆ ಉನ್ನತ ರೂಪ ಪಡೆಯಿತು. ರೈಲ್ವೇ, ಅಂಚೆ ಮತ್ತಿತರ ಮುಷ್ಕರಗಳು ಯುದ್ಧೋತ್ತರ ಕ್ರಾಂತಿಕಾರೀ ಬಂಡಾಯದಲ್ಲಿ ಪ್ರಮುಖ ಪಾತ್ರ ವಹಿಸಿದವು. ವ್ಯಾಪಕವಾಗಿ ಹರಡತೊಡಗಿದ್ದ ರೈತ ಹೋರಾಟಗಳು ಬಂಗಾಳದ ತೇಭಾಗ ಚಳವಳಿಯ ಕಾಲದಲ್ಲಿ ಉನ್ನತ ಘಟ್ಟವನ್ನು ತಲುಪಿತು.

ಜನತೆಯ ಸಮರಶೀಲ ಚಳುವಳಿಗಳು ತಿರುವಾಂಕೂರ್‌ನ 'ಪುನ್ನಪ್ಪುರ—ವಯಲಾರ್'ಮತ್ತು 'ತೆಲಂಗಾಣ' ಬಂಡಾಯಗಳ ಕಾಲದಲ್ಲಿ ತುತ್ತತುದಿಗೇರಿತ್ತು. ಇವುಗಳೆಲ್ಲವೂ ಕಮ್ಯುನಿಸ್ಟ್ ಪಾರ್ಟಿಯ ನಾಯಕತ್ವದಲ್ಲಿ ನಡೆ

ಯುದ್ಧೋತ್ತರ (ಎರಡನೇ ಮಹಾಯುದ್ಧ) ಕಾಲದ ಹೋರಾಟದಲ್ಲಿ ಕಮ್ಯೂನಿಸ್ಟ್ ಪಕ್ಷವು ಮಹತ್ವದ ಪಾತ್ರ ನಿರ್ವಹಿಸಿದ್ದರೂ, ಸ್ವಾತಂತ್ರ್ಯ ಚಳುವಳಿಯ ಬೂರ್ಷ್ವಾ ನಾಯಕತ್ವಕ್ಕೆ ಪರ್ಯಾಯವಾಗುವಷ್ಟು ಶಕ್ತಿಶಾಲಿಯಾಗಿರಲಿಲ್ಲ, ಆದರೂ ಕೂಡ ಇದು ವಸಾಹತುಶಾಹೀ ಆಡಳಿತಗಾರರಿಗೆ ಎಚ್ಚರಿಕೆ ನೀಡುವಲ್ಲಿ ಮತ್ತು ಬೂರ್ಷ್ವಾ ನಾಯಕತ್ವದೊಂದಿಗೆ ತಾನು ಒಪ್ಪಂದಕ್ಕೆ ಬರದೇ ಹೋದಲ್ಲಿ ಸ್ವಾತಂತ್ರ್ಯ ಚಳುವಳಿ ತನ್ನ ಕೈಮೀರಿ ಹೋಗುತ್ತದೆಂಬ ಅರಿವನ್ನುಂಟು ಮಾಡುವಲ್ಲಿ ಮಹತ್ವದ ಪಾತ್ರವಹಿಸಿತು.

ವಸಾಹತುಶಾಹೀ ಆಡಳಿತಗಾರರು ಹಾಗೂ ಬೂರ್ಷ್ವಾ ನಾಯಕತ್ವದ ಸ್ವಾತಂತ್ರ್ಯ ಚಳುವಳಿಯ ನಡುವಿನ ಹೋರಾಟವು ಹೊಸ ವರ್ಗಶಕ್ತಿಯೊಂದನ್ನು ಸೃಷ್ಟಿಸಿತು—ಅದು ಆಧುನಿಕ ಕಾರ್ಮಿಕ ವರ್ಗ. ಈ ವರ್ಗವು ಬೂರ್ಷ್ವಾಗಳಿಗಿಂತಲೂ ದುರ್ಬಲವಾಗಿದ್ದರೂ ಕೂಡ, ಸ್ವಾತಂತ್ರ್ಯ ಹೋರಾಟದ ನಾಯಕತ್ವವನ್ನು ಕೈಗೆತ್ತಿಕೊಳ್ಳಲು ಸರಿಯಾದ ಅನುಭವ ಮತ್ತು ಪರಿಕರಗಳು ಇಲ್ಲದಿದ್ದಾಗ್ಯೂ ಕೂಡ ಈ ಹೊಸ ವರ್ಗ ತನ್ನ ಸ್ವತಂತ್ರ ಅಸ್ತಿತ್ವವನ್ನು ಬೆಳಸಿಕೊಂಡಿತು. ಪ್ರಥಮ ಮಹಾಯುದ್ಧದ ನಂತರದ ವರ್ಷಗಳಲ್ಲಿ ಟ್ರೇಡ್ ಯೂನಿಯನ್ನುಗಳು ಬೆಳೆಯತೊಡಗಿದವು. ರೈತರ

ದಂತಹವುಗಳು. ಬೊಂಬಾಯಿಯಲ್ಲಿ ನಡೆದ ಚಾರಿತ್ರಿಕವಾದ ನೌಕಾ ದಂಗೆಯು ಕಮ್ಯುನಿಸ್ಟರಲ್ಲದವರ ನಾಯಕತ್ವದಲ್ಲಿ ನಡೆದಿದ್ದರೂ ಕೂಡ ಕಮ್ಯುನಿಸ್ಟ್ ಪಕ್ಷದ ಸಂಘಟಿತ ಚಟುವಟಿಕೆಗಳೊಂದಿಗೆ ನಿಕಟವಾದ ಸಂಪರ್ಕ ಹೊಂದಿತ್ತು.

ಯುದ್ಧೋತ್ತರ ಕಾಲದ ಹೋರಾಟದಲ್ಲಿ ಕಮ್ಯುನಿಸ್ಟ್ ಪಕ್ಷವು ಮಹತ್ವದ ಪಾತ್ರ ನಿರ್ವಹಿಸಿದ್ದರೂ, ಸ್ವಾತಂತ್ರ್ಯ ಚಳುವಳಿಯ ಬೂರ್ಷ್ವಾ ನಾಯಕತ್ವಕ್ಕೆ ಪರ್ಯಾಯವಾಗುವಷ್ಟು ಶಕ್ತಿಶಾಲಿಯಾಗಿರಲಿಲ್ಲ. ಆದರೂ ಕೂಡ ಇದು ವಸಾಹತುಶಾಹೀ ಆಡಳಿತಗಾರರಿಗೆ ಎಚ್ಚರಿಕೆ ನೀಡುವಲ್ಲಿ ಮತ್ತು ಬೂರ್ಷ್ವಾ

(7ನೇ ಪುಟ ನೋಡಿ)

ಕೇಂದ್ರ ಸಮಿತಿಯ ವರದಿ:

ಹೋರಾಟದ ಪಥದಲ್ಲಿ ಮಹಿಳೆಯರು

(ಕಳೆದ ಸಂಚಿಕೆಯಿಂದ)

ಇತ್ತೀಚಿನ ದಿನಗಳಲ್ಲಿ ಮಹಿಳೆಯರ ಚಳುವಳಿ ಅಭೂತಪೂರ್ವ ರೀತಿಯಲ್ಲಿ ಬೆಳೆದು ಬರುತ್ತಿರುವುದು ಒಂದು ಗಮನಾರ್ಹವಾದ ಬೆಳವಣಿಗೆ. ವರದಕ್ಷಿಣೆ, ವಧೂ ದಹನ ಇತ್ಯಾದಿಗಳ ವಿರುದ್ಧ ಮಹಿಳೆಯರು ರಸ್ತೆಗಿಳಿದು ಪ್ರದರ್ಶನ ನಡೆಸಿ ತಮ್ಮ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಮಹಿಳೆಯರು ಸ್ವಯಂ ಪ್ರೇರಣೆಯಿಂದ ವ್ಯಕ್ತಪಡಿಸುತ್ತಿರುವ ಈ ಆಕ್ರೋಶವು ಪ್ರಜಾಸತ್ತಾತ್ಮಕ ಚಳುವಳಿಯ ದೃಷ್ಟಿಯಿಂದ ಅತ್ಯಂತ ಮಹತ್ವಪೂರ್ಣದ್ದಾಗಿದೆ. ಅತ್ಯಾಚಾರ ಮತ್ತು ಅನ್ಯಾಯಗಳ ವಿರುದ್ಧ ಮಹಿಳೆಯರು ನಡೆಸುತ್ತಿರುವ ಚಳುವಳಿ ಕೇವಲ ಸಾಮಾಜಿಕ ಸುಧಾರಣೆಗಳಿಗಾಗಿ ನಡೆಯುತ್ತಿರುವ ಹೋರಾಟ ಅಲ್ಲ. ಇದು ಭಾರತೀಯ ಜನತೆ ಪ್ರಜಾಪ್ರಭುತ್ವ ಮತ್ತು ಸಮಾಜವಾದಕ್ಕಾಗಿ ನಡೆಸುತ್ತಿರುವ ಹೋರಾಟದ ಅವಿಭಾಜ್ಯ ಅಂಗವೆನ್ನುವುದನ್ನು ನಮ್ಮ ಪಕ್ಷ ಗುರುತಿಸಿಕೊಳ್ಳಬೇಕು. ಮಹಿಳೆಯರ ವಿರುದ್ಧ ನಡೆಸಲಾಗುತ್ತಿರುವ ತಾರತಮ್ಯವನ್ನು ವಿರೋಧಿಸಿ, ಸಮಾನ ಕೆಲಸಕ್ಕೆ ಸಮಾನ ವೇತನ ಮತ್ತು ಸಾಕಷ್ಟು ಉದ್ಯೋಗಾವಕಾಶ ಇತ್ಯಾದಿಗಳಿಗಾಗಿ ಒತ್ತಾಯಿಸಿ, ಮಹಿಳಾ ಚಳುವಳಿಯಲ್ಲಿ ಹೆಚ್ಚು ಮುಂದುವರಿದ ಜನವಿಭಾಗಗಳು ಈಗಾಗಲೇ ಹೋರಾಟ ನಡೆಸುತ್ತಿದ್ದಾರೆ. ಈ ಸ್ವಯಂಪ್ರೇರಿತ ಚಳುವಳಿಗಳನ್ನು ಕ್ರೋಢೀಕರಿಸಿ. ಅವುಗಳನ್ನು ಪ್ರಜಾಸತ್ತಾತ್ಮಕ ಚಳುವಳಿಯ ಭಾಗವಾಗುವಂತೆ ಅವುಗಳಿಗೆ ನೆರವಾಗಲು ಮತ್ತು ಬೆಳೆಯುತ್ತಿರುವ ಮಹಿಳಾ ಪ್ರತಿಭಟನೆಗೆ ಸೂಕ್ತವಾದ ಸಂಘಟನಾ ಸ್ವರೂಪ ನೀಡಲೂ ನಮ್ಮ ಪಕ್ಷದ ಎಲ್ಲಾ ಹಂತದಲ್ಲಿನ ಘಟಕಗಳೂ ಶ್ರಮಿಸಬೇಕು.

ಪೋಲೀಸ್ ಪಡೆಯ ಸಿಬ್ಬಂದಿಗಳೂ ಇತ್ತೀಚೆಗೆ ಸಕ್ರಿಯ ಪ್ರತಿಭಟನೆಗಳನ್ನು ಹೋರ್ಪಡಿಸುತ್ತಿರುವುದು ಇನ್ನೊಂದು ಪ್ರಮುಖ ಬೆಳವಣಿಗೆ. ಅನೇಕ ಸಮಸ್ಯೆಗಳು ಪೋಲೀಸ್ ಸಿಬ್ಬಂದಿಯನ್ನು ಬಹುಕಾಲದಿಂದ ಬಾಧಿಸುತ್ತಿವೆ ಮತ್ತು ಕಾಂಗ್ರೆಸ್ (ಐ) ಆಳರಸರು ಇದನ್ನು ಪರಿಹರಿಸಲು ಸರ್ವಥಾ ಒಪ್ಪುತ್ತಿಲ್ಲ. ಮಹಾರಾಷ್ಟ್ರ ಸರಕಾರವು ಪೋಲೀಸರ ಸಮಸ್ಯೆಗಳ ಅಧ್ಯಯನಕ್ಕಾಗಿ ಸಮಿತಿಯೊಂದನ್ನು ನೇಮಿಸಿದೆ.

ಹರ್ಯಾಣಾ ಸರಕಾರವು ಪೋಲೀಸರ ಕೆಲವು ಮುಖ್ಯವಾದ ಬೇಡಿಕೆಗಳನ್ನು ಈಡೇರಿಸಿದೆ. ಹಾಗಾಗಿ ಪೋಲೀಸರ ಬೇಡಿಕೆಗಳು ನ್ಯಾಯಸಮ್ಮತವಾಗಿವೆಯೆನ್ನುವುದಕ್ಕೆ ಯಾವ ಸಂಶಯವೂ ಇಲ್ಲ. ಆದರೆ ಇವೆರಡು ರಾಜ್ಯಗಳಲ್ಲಿ ಪೋಲೀಸರು ಹೋರಾಟಕ್ಕಿಳಿದ ಮೇಲೆಯೇ ಅಲ್ಲಿನ ಸರಕಾರಗಳು ಇಂತಹ ಕ್ರಮಕೈಗೊಂಡಿವೆ. ಈ ಎರಡು ರಾಜ್ಯಗಳೂ ಪೋಲೀಸರ ಬೇಡಿಕೆಗಳು ನ್ಯಾಯಬದ್ಧವಾಗಿರುವುದನ್ನು ಒಪ್ಪಿಕೊಳ್ಳಲೇಬೇಕಾಯಿತಾದರೂ ಅಲ್ಲಿ ಬಹುಮಂದಿ ಪೋಲೀಸರನ್ನು ಕೆಲಸದಿಂದ ಕಿತ್ತುಹಾಕುವುದು, ಪೋಲೀಸ್ ಸಂಘಟನೆಯ ಮುಂದಾಳುಗಳ ಬಂಧನ, ಸ್ಥಾನಬದ್ಧತೆ ಮತ್ತು ಸಂಘಟನೆಯ ಮಾನ್ಯತೆಯನ್ನು ರದ್ದುಗೊಳಿಸುವುದು ಇವೇ ಮೊದಲಾದ ಸೇಡಿನ ಕ್ರಮಗಳನ್ನೂ ಸರಕಾರಗಳು ಕೈಗೊಂಡಿವೆ. ಆದರೆ ಇಂತಹ ಸೇಡಿನ ಕ್ರಮಗಳಿಂದಾಗಿ ಪೋಲೀಸರ ಅಸಂತೃಪ್ತಿ ಇನ್ನಷ್ಟು ಬೆಳೆಯುವುದು ಖಂಡಿತ. ಮುಂದೊಂದು ದಿನ ಇದು ಇನ್ನಷ್ಟು ಅಗಾಧ ಪ್ರಮಾಣದಲ್ಲಿ ಆಸ್ಫೋಟಗೊಳ್ಳಲು ಅವಕಾಶ ಮಾಡಿಕೊಡುತ್ತದೆ. ಪೋಲೀಸರ ಮೇಲೆ ಕೈಗೊಳ್ಳಲಾಗಿರುವ ಶಿಕ್ಷಾಕ್ರಮಗಳನ್ನೂ ರದ್ದುಪಡಿಸಿ, ಅವರ ಸಂಘಟನೆಗಳ ಮಾನ್ಯತೆಯನ್ನು ಮರಳಿ ನೀಡಿ, ಅವರ ಸಮಸ್ಯೆಗಳನ್ನು ಬಗೆಹರಿಸುವ ದೃಷ್ಟಿಯಿಂದ ಮಾತುಕತೆಗಳನ್ನು ನಡೆಸಬೇಕಾದುದು ತಕ್ಷಣ ನಡೆಯಬೇಕಾದ ಕೆಲಸ.

ಸರಕಾರದ ನೀತಿಗಳಲ್ಲಿ ಬದಲಾವಣೆಗಾಗಿ ಹೋರಾಟ

ಇಲ್ಲಿ ಹೇಳಿರುವಂತಹ ಹೋರಾಟಗಳು ಸಾಮಾಜಿಕ-ಆರ್ಥಿಕ ನೀತಿಗೆ ಸಂಬಂಧಿಸಿದಂತಹ ಮೂಲಭೂತ ಪ್ರಶ್ನೆಗಳಿಗೂ ಅವಕಾಶಮಾಡಿಕೊಡುತ್ತವೆ. ಕಾರ್ಮಿಕ ವರ್ಗ, ರೈತಾಪಿ ಜನ, ಮಧ್ಯಮ ವರ್ಗದ ನೌಕರರು ಮತ್ತು ದುಡಿಯುವ ವರ್ಗಕ್ಕೆ ಸೇರಿದ ಇತರ ಜನರು ಎದುರಿಸುತ್ತಿರುವ ಸಮಸ್ಯೆಗಳು ಕಳೆದ ಮೂವತ್ತೈದು ವರ್ಷಗಳಿಂದ ನಮ್ಮ ದೇಶದ ಆಳುವ ವರ್ಗಗಳು ಅನುಸರಿಸಿಕೊಂಡು ಬಂದಿರುವ ಬಂಡವಾಳಶಾಹಿ ಅಭಿವೃದ್ಧಿಯ ಮಾರ್ಗದೊಂದಿಗೆ ಅವಿಚ್ಛಿನ್ನವಾದ ಸಂಬಂಧ ಹೊಂದಿವೆ. ಆದಕಾರಣ ತಮ್ಮ ತುರ್ತಿನ ಬೇಡಿಕೆಗಳಿಗಾಗಿ ಹೋರಾಡುವ ಜನತೆ ನಮ್ಮ ಆಳುವ ವರ್ಗಗಳು ಅನುಸರಿಸುತ್ತಿರುವ ಬಂಡವಾಳಶಾಹಿ ಅಭಿವೃದ್ಧಿಯ ಮಾರ್ಗದಿಂದಾಗಿ ಉದ್ಭವಿಸಿರುವ ಮೂಲಭೂತ ಸಮಸ್ಯೆಗಳನ್ನೂ ಮುಖಾಮುಖಿಯಾಗಿ ಎದುರಿಸಲೇಬೇಕಾಗುತ್ತದೆ.

ಸಿ. ಪಿ. ಐ. (ಎಂ) ಮತ್ತು ಅದರ ಮಿತ್ರರಾದ ಇತರ ಎಡ ಪಕ್ಷದಲ್ಲಿ ಈ ನಿಟ್ಟಿನಲ್ಲಿ ಬೂರ್ಶ್ವಾ ವಿರೋಧ ಪಕ್ಷಗಳೊಂದಿಗೆ ಅಥವಾ ಪತ್ರಿಕೆಗಳಲ್ಲಿ ಈಗ ವ್ಯಾಪಕವಾಗಿ ಬಳಸಲ್ಪಡುತ್ತಿರುವ ಪದವನ್ನೇ ಉಪಯೋಗಿಸಬೇಕೆಂದಿದ್ದರೆ— ಎಡ ಪಕ್ಷಗಳಲ್ಲದ ವಿರೋಧ ಪಕ್ಷಗಳೊಂದಿಗೆ (non-left opposition parties) ತೀವ್ರವಾದ ಭಿನ್ನಾಭಿಪ್ರಾಯ ಹೊಂದಿವೆ.

ಕೆಲವು ವಿಚಾರಗಳಿಗೆ ಒತ್ತು ಕೊಡುವುದರಲ್ಲಿ ವ್ಯತ್ಯಾಸವಿದ್ದರೂ, ಎಲ್ಲಾ ಎಡ ವಿರೋಧ ಪಕ್ಷಗಳು ಒಟ್ಟಾರೆಯಾಗಿ ನಮ್ಮ ಆಳುವ ವರ್ಗಗಳು ಅನುಸರಿಸುತ್ತಿರುವ ಮೂಲಭೂತ ಸಾಮಾಜಿಕ–ಆರ್ಥಿಕ ನೀತಿಯನ್ನು ವಿರೋಧಿಸುತ್ತವೆ. ಆಳುವ ಪಕ್ಷ ಮತ್ತು ವಾಮಪಂಥೀಯ ವಿರೋಧ ಪಕ್ಷಗಳ ನಡುವಿನ ಸಂಘರ್ಷದಲ್ಲಿ, ಜಾಗತಿಕ ಬಂಡವಾಳಶಾಹಿಯೆಡೆಗೆ ತೋರಿಸುವ ವರ್ತನೆ ಮತ್ತು ಅದರೊಂದಿಗೆ ಯಾವುದೇ ರಾಜಿಗೆ ಅವಕಾಶವಿಲ್ಲದಂತೆ ಅದನ್ನು ವಿರೋಧಿಸಬೇಕಾದ ಅಗತ್ಯ, ವ್ಯಾವಸಾಯಿಕ ಮತ್ತಿತರ ವಿಷಯಗಳಿಗೆ ಸಂಬಂಧಿಸಿದಂತೆ ಪಾಳೆಯಗಾರಿ ವಿರೋಧಿ ನಿಲುವೆಯನ್ನು ಅಂಗೀಕರಿಸಬೇಕಾದುದರ ಅನಿವಾರ್ಯತೆ ಮತ್ತು ದಿನೇ ದಿನೇ ಬೆಳೆಯುತ್ತಿರುವ ಭಾರತೀಯ ವಿಕಸ್ವಾಮ್ಯವಾದಿಗಳ ವಿರುದ್ಧ ಹೋರಾಟ ನಡೆಸಬೇಕಾದುದು ಇತ್ಯಾದಿ ಪ್ರಶ್ನೆಗಳು ಅಡಕವಾಗಿವೆ.

ಬೂರ್ಶ್ವಾ ವಿರೋಧ ಪಕ್ಷಗಳು– ಅಥವಾ ಎಡ ಪಕ್ಷಗಳಲ್ಲದ ವಿರೋಧ ಪಕ್ಷಗಳು ಈ ಎಲ್ಲಾ ಪ್ರಶ್ನೆಗಳಲ್ಲೂ ಹೆಚ್ಚು ಕಡಿಮೆ ಆಳುವ ಪಕ್ಷದೊಂದಿಗೆ ಸಹಮತ ಹೊಂದಿವೆ. ಈ ವಿರೋಧ ಪಕ್ಷಗಳು ಅಥವಾ ಅವುಗಳಲ್ಲಿ ಯಾವುದಾದರೊಂದು ಪಕ್ಷವು ಆಳುವ ಪಕ್ಷದೊಂದಿಗೆ ಭಿನ್ನಮತ ಹೊಂದಿದ್ದರೆ ಅದು ಕೇವಲ ಸಣ್ಣಪುಟ್ಟ ವಿಚಾರದಲ್ಲಿ ಮಾತ್ರ. ಹಾಗಾಗಿಯೇ ಈ 'ವಾಮೇತರ' ಪಕ್ಷಗಳನ್ನು ಒಂದುಗೂಡಿಸುವ ಪ್ರಯತ್ನ ನಡೆಯುತ್ತಿದೆ.

ಕಳೆದ ಏಳು ತಿಂಗಳ ಅವಧಿಯಲ್ಲೂ ಈ ಪ್ರಯತ್ನ ಮುಂದುವರಿದಿದೆ. ಆದರೆ ಈ ಎಲ್ಲಾ ಪ್ರಯತ್ನಗಳೂ ವಿಫಲವಾದದ್ದು ಮಾತ್ರವಲ್ಲ, ಎಡ ಪಕ್ಷಗಳಲ್ಲದ ಇತರ ವಿರೋಧ ಪಕ್ಷಗಳನ್ನು ಒಂದುಗೂಡಿಸಲು ಮುತುವರ್ಜಿ ನಡೆಸಿದ ಅನೇಕ ವಿರೋಧ ಪಕ್ಷಗಳು ಸ್ವತಃ ತಾವೇ ತಮ್ಮ ಒಗ್ಗಟ್ಟನ್ನು ಕಾಪಾಡಿಕೊಳ್ಳಲೂ ಅಶಕ್ತವಾಗಿದೆ.

ಉತ್ತರ ಭಾರತದ ಗ್ರಾಮಾಂತರ ಪ್ರದೇಶಗಳಲ್ಲಿ ಸ್ವಲ್ಪವಾದರೂ ನೆಲೆಯಿರುವ ಒಂದೇ ಒಂದು ವಿರೋಧ ಪಕ್ಷವೆಂದರೆ ಲೋಕದಳ. ಈ ಪಕ್ಷವೂ ಈಗ ಒಡೆದು ಹೋಗುತ್ತಿದೆ. ಇನ್ನೂ ಒಂದು ಪಕ್ಷ, ಕಾಂಗ್ರೆಸ್ (ಎಸ್) ತನ್ನ ಅಖಿಲ ಭಾರತ ಸ್ವರೂಪವನ್ನು ಕಳೆದುಕೊಳ್ಳುತ್ತಿದೆ. ಈ ಪಕ್ಷದ ಕೇರಳ, ಪ. ಬಂಗಾಳ, ಮಹಾರಾಷ್ಟ್ರ ಮತ್ತು ಅಸ್ಸಾಂ ರಾಜ್ಯ ಘಟಕಗಳು ತಮಗಿಷ್ಟ ಬಂದ ದಿಕ್ಕಿನಲ್ಲಿ ಸಾಗುತ್ತಿವೆ. ಜನತಾ ಪಕ್ಷವೂ ತನ್ನ ಆಂತರಿಕ ಐಕ್ಯತೆಯನ್ನು ಕಾಪಾಡಿಕೊಳ್ಳಲು ಅಸಮರ್ಥವಾಗಿದೆ.

ಈ ಬೂರ್ಶ್ವಾ ವಿರೋಧ ಪಕ್ಷಗಳ ವೈಫಲ್ಯಕ್ಕೆ ಅವುಗಳ ಮುಂದಾಳುಗಳ ವೈಯಕ್ತಿಕದ ದೌರ್ಬಲ್ಯ ಅಥವಾ ಇತಿಮಿತಿಗಳು ಕಾರಣವಲ್ಲ. ಬದಲು ಈ ಪಕ್ಷಗಳ ನೀತಿಯಲ್ಲೇ ಇದಕ್ಕೆ ಕಾರಣಗಳನ್ನು ಕಂಡುಕೊಳ್ಳಬೇಕಾಗುತ್ತದೆ. ಆಳುವ ಪಕ್ಷದ ಮೂಲಭೂತ ಸಾಮಾಜಿಕ-ಆರ್ಥಿಕ ಧೋರಣೆಗಳಿಗೆ ವಿರುದ್ಧವಾಗಿರುವಂತಹ ಯಾವುದೇ ನೀತಿ ಈ ಯಾವ ವಿರೋಧ ಪಕ್ಷಗಳ ಬಳಿ ಇಲ್ಲ. ಹಾಗಾಗಿ ಅವು ಕಾಂಗ್ರೆಸ್(ಐ) ಅಥವಾ ಎಡ ವಿರೋಧ ಪಕ್ಷಗಳಂತೆ ಜನರನ್ನು ತಮ್ಮ ಜೊತೆ ಅಣಿ ನೆರೆಯಿಸಲು ಅಸಮರ್ಥವಾಗಿವೆ.

ಆದರೆ ಅದೇ ವೇಳೆಗೆ ಜನಸಾಮಾನ್ಯರ ಪ್ರಜಾಸತ್ತಾತ್ಮಕ ಪ್ರಜ್ಞೆ ಬೆಳೆಯುತ್ತಿರುವುದನ್ನೂ ಈ ಪಕ್ಷಗಳು ಅವಗಣಿಸಲು ಸಾಧ್ಯವಿಲ್ಲ. ಹಾಗಾಗಿ ಅವು ಸಂಸತ್ತು ಮತ್ತು ವಿಧಾನ ಮಂಡಲಗಳೊಳಗೆ ಎಡ ವಿರೋಧ ಪಕ್ಷಗಳೊಂದಿಗೆ ಸೇರಿ ಕಾಂಗ್ರೆಸ್ (ಐ) ಸರಕಾರಗಳ ಪ್ರತಿಗಾಮಿ ನೀತಿಯನ್ನು ವಿರೋಧಿಸಬೇಕಾದುದು ಅನಿವಾರ್ಯ. ನ್ಯಾಯಾಂಗದೊಳಗೆ ತನಗೆ 'ಬದ್ಧ'ರಾಗಿರುವ ನ್ಯಾಯಾಧೀಶರನ್ನು ತುರುಕಲು ಆಳುವ ಪಕ್ಷ ಪ್ರಯತ್ನಿಸುತ್ತಿದೆ. ಸದ್ಯದಲ್ಲೇ ರಾಜ್ಯ ಸಭೆಯಲ್ಲೂ ಕಾಂಗ್ರೆಸ್ (ಐ)ಗೆ ಮೂರನೇ ಎರಡರಷ್ಟು ಬಹುಮತ ಬರುವ ಸಾಧ್ಯತೆಗಳೂ ಇವೆ. ರಾಷ್ಟ್ರೀಯ ಭದ್ರತಾ ಕಾಯಿದೆ, ಅವಶ್ಯಕ ಸೇವಾ ಮಸೂದೆ, ಇತ್ಯಾದಿಗಳನ್ನು ಜಾರಿಗೊಳಿಸಿದುದರ ಬೆನ್ನ ಹಿಂದೆಯೇ ಪತ್ರಿಕೆಗಳ ಬಾಯಿ ಮುಚ್ಚಿಸಲು ಬಿಹಾರ್ ಪತ್ರಿಕಾ ಮಸೂದೆ ಬಂದಿದೆ. ಈ ಎಲ್ಲ ವಿದ್ಯಮಾನಗಳ ಹಿನ್ನಲೆಯಲ್ಲಿ ಇನ್ನೊಂದು ವಿಷಮ ಪರಿಸ್ಥಿತಿಯನ್ನು ದೇಶದ ಮೇಲೆ ಹೇರುವ ಅಪಾಯವಿದೆಯೆಂದು ಬೂರ್ಶ್ವಾ ವಿರೋಧ ಪಕ್ಷಗಳು ಶಂಕಿಸಲಾರಂಭಿಸಿವೆ. ಕೆಲವು ಬೂರ್ಶ್ವಾ ವಿರೋಧ ಪಕ್ಷಗಳು ವಿಛಿದ್ರೀಕರಣಗೊಳ್ಳುತ್ತಿದ್ದರೂ, ಸರಕಾರದ ಈ ಎಲ್ಲ ಕ್ರಮಗಳ ವಿರುದ್ಧ ಅವು ಇತರ ವಿರೋಧ ಪಕ್ಷಗಳ ಜೊತೆ ಸೇರಿ ಹೋರಾಡಲು ಮುಂದಾಗುತ್ತಿವೆ. ಇದು ಸರ್ವಾಧಿಕಾರದ ವಿರುದ್ಧ ನಡೆಸುವ ಹೋರಾಟವನ್ನು ಬಲಪಡಿಸುವುದಷ್ಟೇ ಅಲ್ಲ; ಎಡ ಪಕ್ಷಗಳು ಅದರಲ್ಲೂ ಮುಖ್ಯವಾಗಿ ಸಿ.ಪಿ.ಐ. (ಎಂ) ಪ್ರತಿಪಾದಿಸಿರುವಂತಹ 'ವಿಶಾಲ ತಳಹದಿಯ ಸರ್ವಾಧಿಕಾರ ವಿರೋಧಿ' ರಂಗವೊಂದರ ನಿರ್ಮಾಣದ ನಿಲುವೆಯನ್ನು ಸಮರ್ಥಿಸುತ್ತದೆ.

ಇದೇ ವೇಳೆಗೆ ಹೆಚ್ಚಿನ ಕಡೆ ಎಡ ಪಕ್ಷಗಳ ನೇತೃತ್ವದಲ್ಲಿ ಬೃಹತ್ ಹೋರಾಟಗಳುದೇಶದಾದ್ಯಂತ ನಡೆಯುತ್ತಿವೆ. ಇದರಿಂದಾಗಿ ಎಡ ಪಕ್ಷಗಳ ಐಕ್ಯವೂ ಬಲಗೊಳುತ್ತಿದೆ. ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಐಕ್ಯತೆಯನ್ನು ಬಲಪಡಿಸಲೂ ಮತ್ತು ಆಳುವ ಪಕ್ಷಕ್ಕೆ ಬದಲಾಗಿ ಎಡ ಹಾಗೂ ಪ್ರಜಾಸತ್ತಾತ್ಮಕ ಶಕ್ತಿಗಳು ಒಂದು ಪರ್ಯಾಯ ಶಕ್ತಿಯಾಗಿ ಬೆಳೆದು ಬರಲು ಈ ಮೂಲಕ ಸಾಧ್ಯವಾಗುತ್ತಿದೆ.

(ಮುಂದುವರಿಯುವುದು)

ಸಂಬಂಧವಿಲ್ಲ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ಕಾರ್ಯದರ್ಶಿಯವರಾದ ಕಾಂ। ಕೆ. ಆರ್. ಶ್ರೀಯಾನ್ ಈ ಕೆಳಗಿನ ಪತ್ರಿಕಾ ಹೇಳಿಕೆಯನ್ನು ನೀಡಿರುತ್ತಾರೆ.

"ಬೆಳ್ತಂಗಡಿಯಲ್ಲಿ ಇತ್ತೀಚೆಗೆ ಭಾರತೀಯ ಜನತಾ ಪಾರ್ಟಿ, ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ, ಕರ್ನಾಟಕ ಕ್ರಾಂತಿರಂಗ, ಜನತಾ ಪಕ್ಷ, ಲೋಕದಳ ಕಾರ್ಯಕರ ವಿಶೇಷ ಸಭೆ ನಡೆದಿದೆಯೆಂದೂ, ಈ ಸಭೆಯಲ್ಲಿ ವಿರೋಧಪಕ್ಷಗಳ ಐಕ್ಯದ ಬಗ್ಗೆ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಲಾಯಿತೆಂದೂ ತಾರೀಕು 24-10-1982ರ ಉದಯವಾಣಿ ಪತ್ರಿಕೆಯಲ್ಲಿ ವರದಿಯಾಗಿದೆ. ಅದೇ ಸಭೆಯಲ್ಲಿ ಪ್ರತಿ ಪಕ್ಷ ಸಮನ್ವಯ ಸಮಿತಿಯೊಂದನ್ನು ರಚಿಸಲಾಗಿದೆಯೆಂದೂ ವರದಿಯಾಗಿದೆ."

"ಮೇಲೆ ಹೇಳಿದ ಸಭೆಗೂ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷಕ್ಕೂ ಏನೂ ಸಂಬಂಧವಿಲ್ಲವೆಂದೂ ಪಕ್ಷದ ಜಿಲ್ಲಾ ಸಮಿತಿಯು ಸ್ಪಷ್ಟಪಡಿಸಬಯಸುತ್ತದೆ. ನಮ್ಮ ಪಕ್ಷದ ರಾಜಕೀಯ ನಿಲುವೆಗಳನ್ನು, ಚುನಾವಣಾ ತಂತ್ರಗಳನ್ನು ಪಕ್ಷದ ಕೇಂದ್ರ ಸಮಿತಿಯು ರೂಪಿಸುತ್ತದೆ. ಆಯಾ ರಾಜ್ಯಗಳಲ್ಲಿ ಪಕ್ಷದ ರಾಜ್ಯ ಸಮಿತಿಯು ಈ ಕುರಿತು ಅಗತ್ಯವಿರುವ ಕ್ರಮವಹಿಸುತ್ತದೆ. ಯಾವುದೇ ಸ್ಥಳೀಯ ಮುಂದಾಳುಗಳಿಗೆ ರಾಜಕೀಯ ಪ್ರಶ್ನೆಗಳ ಕುರಿತು ತೀರ್ಮಾನ ಮಾಡಲು ಅಧಿಕಾರವಿರುವುದಿಲ್ಲ. ಬೆಳ್ತಂಗಡಿಯಲ್ಲಿ ನಡೆದಿದೆಯೆಂದು ವರದಿಯಾಗಿರುವ ಸಭೆಯಲ್ಲಿ ನಮ್ಮ ಪಕ್ಷವು ಅಧಿಕೃತವಾಗಿ ಭಾಗವಹಿಸಿರುವುದಿಲ್ಲ ಮತ್ತು ಈ ಸಭೆಯಲ್ಲಿ ಕೈಗೊಳ್ಳಲಾಗಿದೆಯೆಂದು ವರದಿಯಾಗಿರುವ ತೀರ್ಮಾನಗಳಿಗೂ ನಮ್ಮ ಪಕ್ಷಕ್ಕೂ ಯಾವುದೇ ಸಂಬಂಧವಿಲ್ಲವೆಂದೂ ಈ ಮೂಲಕ ನಾವು ಸ್ಪಷ್ಟಪಡಿಸುತ್ತೇವೆ."

○

ನನ್ನ ಭೂಗತ ಜೀವನದ ದಿನಗಳು

—ಇ. ಕೆ. ನಾಯನಾರ್

(ಕಳೆದ ಸಂಚಿಕೆಯಿಂದ)

ಕೆಲವು ದಿನಗಳು ಕಳೆದ ಮೇಲೆ ಪೋಲೀಸರು ನನ್ನನ್ನು ಹುಡುಕುತ್ತಾ ಅಲೆದು ನಾನು ಅಡಗಿಕೊಂಡಿದ್ದ ಮನೆಯಲ್ಲೇ ವಿಶ್ರಾಂತಿ ಪಡೆಯಲು ಬಂದರು. ಮಹಡಿಯ ಮೇಲಿದ್ದ ನನಗೆ ಅವರ ಮಾತುಗಳು ಕೇಳಿಸುತ್ತಿದ್ದವು. ಪೋಲೀಸರು ಹೊರಗೆ ಹೋಗುವವರೆಗೂ ನನ್ನ ಸಂಗಾತಿಗಳು ಆ ಮನೆಯ ಬಳಿಯಲ್ಲೇ ಕಾಯುತ್ತಿದ್ದರು. ನಾನು ಇಡೀ ಒಂದು ತಿಂಗಳು ಕಾಲ ಮಹಡಿಯ ಮೇಲೆ ಗುಟ್ಟಾಗಿ ಉಳಿದುಕೊಂಡಿದ್ದೆನು.

ಮೊರಾಜಾದಿಂದ ನಾನು ಉಪಾಧ್ಯಾಯನಂತೆ ಕರ್ನಾಟಕವನ್ನು ತಲುಪಿದೆನು. ಕಾಡಿನೊಳಗೆ ಬಹಳ ದಿನಗಳ ಕಾಲ ಪ್ರಯಾಸಕರ ಪ್ರಯಾಣ ಮಾಡಿದ ಮೇಲೆ ಆದಿವಾಸಿಯೊಬ್ಬನ ಗುಡಿಸಲನ್ನು ಕಂಡು ಅಲ್ಲಿಗೆ ಹೋದೆನು. ಆ ಆದಿವಾಸಿಯು ನನಗೆ ತಿನ್ನಲು ಒಂದಿಷ್ಟು ಹಸಿ ಮಾಂಸ ಮತ್ತು ಪಕ್ಕದ ಮನೆಯಿಂದ ಸ್ವಲ್ಪ ಮರಗೆಣಸನ್ನು ತಂದು ಕೊಟ್ಟನು. ಅದನ್ನುಳಿದು ಬೇರೇನೂ ಕೊಡಲು ಅತನ ಬಳಿಯಿರಲಿಲ್ಲ. ಎರಡು ದಿನಗಳಿಂದ ಆಹಾರವಿಲ್ಲದ್ದರಿಂದ ಈ ಊಟವು ನನಗೆ ಬಹಳ ರುಚಿಕರವಾಗಿ ಕಂಡಿತು. ಬಹುಶಃ ನನ್ನ ಜೀವನದಲ್ಲೇ ಇದಕ್ಕಿಂತ ಉತ್ತಮವಾದ ಊಟ ಮಾಡಿಲ್ಲ.

ಇದಾದ ಸ್ವಲ್ಪ ಕಾಲದ ನಂತರ ಕಯ್ಯೂರು ಬಂಡಾಯ ನಡೆಯಿತು. ರೈತ ಸಂಘವು ಹೊಸದುರ್ಗದ ಅತಿ ದೊಡ್ಡ ಭೂಮಾಲೀಕನೂ ಆಗಿದ್ದ ನೀಲೇಶ್ವರ ರಾಜನಿಗೆ ಒಂದು ಮನವಿ ಸಲ್ಲಿಸಲು ತೀರ್ಮಾನಿಸಿತು. ಬೃಹತ್ ಮೆರವಣಿಗೆಯ ಮೂಲಕ ಹೋಗಿ ಮನವಿ ಸಲ್ಲಿಸಬೇಕೆಂಬ ಈ ತೀರ್ಮಾನವನ್ನು 1941ರ ಮಾರ್ಚ್‌ನಲ್ಲಿ ತೆಗೆದುಕೊಳ್ಳಲಾಯಿತು. ರಾಜನು ಅಕ್ರಮ ವಸೂಲಿಯನ್ನು ನಿಲ್ಲಿಸಲು ಒಪ್ಪಿದಲ್ಲಿ ಸಣ್ಣ ಪುಟ್ಟ ಭೂಮಾಲೀಕರೂ ಒಪ್ಪುವರೆಂಬುದು ನಮ್ಮ ಅಂದಾಜಾಗಿತ್ತು. ಮಾರ್ಚ್ 30 ರಂದು ನೀಲೇಶ್ವರದಲ್ಲಿ ಒಂದು ಪ್ರದರ್ಶನ ನಡೆಸಿ ಅನಂತರ ಮನವಿ ಸಲ್ಲಿಸಲು ನಾವು ತೀರ್ಮಾನಿಸಿದೆವು. ಇದಕ್ಕೆ ಮುಂಚಿತವಾಗಿಯೇ ರೈತರ ಕುಂದುಕೊರತೆಗಳ ಮತ್ತು ಬೇಡಿಕೆಗಳ ಬಗ್ಗೆ ಒಂದು ಮನವಿಯನ್ನು ಸಿದ್ಧಪಡಿಸಿ ಅದರ ಒಂದು ಪ್ರತಿಯನ್ನು ರಾಜನಿಗೆ ಕಳುಹಿಸಿಕೊಡಲಾಯಿತು. ಮೆರವಣಿಗೆಯಿಂದಾಗಿ ಸಾಕಷ್ಟು ಪ್ರಚಾರ ದೊರೆತು ಸಾರ್ವಜನಿಕ ಚರ್ಚೆ ಪ್ರಾರಂಭವಾಯಿತು. ನೀಲೇಶ್ವರದ ರಾಜ, ಇತರೆ ಭೂಮಾಲೀಕರು ಮತ್ತು ಪೋಲೀಸರು ರಾಜನ ವಸತಿ ಗೃಹದಲ್ಲಿ ಒಟ್ಟು ಸೇರಿದರು. ಅವರು ಒಂದು ಹೇಳಿಕೆಯನ್ನು ಸಿದ್ಧಪಡಿಸಿ ಜಿಲ್ಲೆಯ ಅಧಿಕಾರಿಗಳಿಗೆ ಸಲ್ಲಿಸಿದರು. ರೈತ ಸಂಘದ ಕಾರ್ಯಕರ್ತರು ರಾಜನ ಮನೆಯೊಳಗೆ ಬಲಾತ್ಕಾರವಾಗಿ ನುಗ್ಗಲು ಪ್ರಯತ್ನಿಸಿದ್ದು ಆಸ್ತಿ-ಪಾಸ್ತಿಗೆ ಮತ್ತು ಪ್ರಾಣ ರಕ್ಷಣೆ ನೀಡಬೇಕೆಂದು ಅವರು ಕೇಳಿಕೊಂಡರು. ಇಲ್ಲಿಂದ ಮುಂದೆ ಪೋಲೀಸರು ಕಯ್ಯೂರು ಹಳ್ಳಿಯ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸಿದರು.

ನಾನು ಮಾರ್ಚ್ 24 ರಂದು ಕಯ್ಯೂರಿಗೆ ಹೋಗಿ ಅಗತ್ಯ ಮಾರ್ಗದರ್ಶನ ನೀಡಿದೆನು. ಮಾರ್ಚ್ 25 ರಂದು ಕಯ್ಯೂರಿನ ರೈತ ಸ್ವಯಂಸೇವಕರ ಮುಂದಾಳತ್ವದಲ್ಲಿ ಯುದ್ಧ ವಿರೋಧಿ ಪ್ರದರ್ಶನವೊಂದು ನಡೆಯಿತು. ರೆವಿನ್ಯೂ ಇನ್‌ಸ್ಪೆಕ್ಟರ್ ಬಾಲಕೃಷ್ಣನ್ ನಾಯರ್ ಮೆರವಣಿಗೆಯು ಕಿರಿದಾದ ಗಲ್ಲಿಯೊಂದರಲ್ಲಿ ಬರುತ್ತಿದ್ದುದನ್ನು ಗಮನಿಸಿದನು. ಮೆರವಣಿಗೆಕಾರರು ಎದುರು ದಿಕ್ಕಿನಿಂದ ಬರುತ್ತಿದ್ದ ರೆವಿನ್ಯೂ ಇನ್‌ಸ್ಪೆಕ್ಟರ್‌ಗೆ ಜಾಗ ಮಾಡಿಕೊಡಲಿಲ್ಲ. ಆ ಅಧಿಕಾರಿಯು ಇದು ತನಗಾದ ಅವಮಾನವೆಂದು ಪರಿಗಣಿಸಿ ಅವರಿಗೆಲ್ಲಾ ಒಂದು ಪಾಠ ಕಲಿಸಬೇಕೆಂದು ತೀರ್ಮಾನಿಸಿದನು. ಅವನು ಜಿಲ್ಲಾಧಿಕಾರಿಗಳಿಗೆ ಮತ್ತು ಪೋಲೀಸರಿಗೆ ದೂರು ನೀಡಿದನು. ಟಿ.ವಿ.ಕುಂಜಂಬು, ಚೂರಿಕ್ಕಾಟನ್ ಕೃಷ್ಣನ್ ನಾಯರ್, ಟಿ. ವಿ. ಕುನ್ಹಿರಾಮನ್, ಪಿ. ಟಿ. ಅಂಬಾಡಿ ಕುನ್ಹಿ, ಕೋಯಿತಾಟ್ಟಿಲ್ ಚಿರುಕಂಟನ್ ಮತ್ತು ಕೆ. ಪಿ. ವೆಲ್ಲುಂಗರವರ ಮೇಲೆ ಮೊಕದ್ದಮೆ ಹೂಡಲಾಯಿತು.

ಅಂದು ರಾತ್ರಿ ಗೋವಿಂದನ್ ನಂಬಿಯಾರ್ ಎಂಬ ಪೋಲೀಸ್ ಪೇದೆಯೊಬ್ಬನನ್ನು ಅಧಿಕಾರಿಯವರ ಮನೆಯಲ್ಲಿ ಮಲಗಿದ್ದಾಗ ಹೊಡೆಯಲಾಯಿತು. ಮಾರನೆಯ ದಿನ ಪೋಲೀಸರ ದಾಳಿಯನ್ನು ನಿರೀಕ್ಷಿಸಿದ್ದೆವು. ಈ ಪ್ರಕರಣದಿಂದ ಬಿಸಿ ವಾತಾವರಣ ಮೂಡಿತು, ರೈತ ಸಂಘದ ಕಾರ್ಯಕರ್ತರು ಯಾವುದೇ ಪರಿಸ್ಥಿತಿಯನ್ನು ಎದುರಿಸಲು ಸಿದ್ಧರಾದರು. ಪ್ರತಿಯೊಬ್ಬರನ್ನು ಚುರುಕುಗೊಳಿಸುವಂತೆ ನಾವು ತಿಳಿಸಿದೆವು. ಆ ರಾತ್ರಿ ಸಂಗಾತಿಗಳು ಮನೆಗಳಲ್ಲಿ ಮಲಗಲಿಲ್ಲ. ಬೋಟ್ ಜೆಟ್ಟಿ ಬಳಿಯಲ್ಲಿದ್ದ ಮಾದತ್ತಿಲ್ ಅಪ್ಪುವಿನ ಚಹಾ ಅಂಗಡಿ ಬಳಿ ನಾವೆಲ್ಲಾ ಸೇರಿದೆವು.

ಸಬ್-ಇನ್‌ಸ್ಪೆಕ್ಟರ್ ನಿಕೊಲಸ್‌ನ ಜೊತೆ ಪೋಲೀಸರ ಗುಂಪೊಂದು ಕಂಜನಗಾಡ್‌ನಿಂದ ದೋಣಿಯಲ್ಲಿ ಬಂದರು. ಅವರು ರೈತ ಸಂಘದ ಕಾರ್ಯಕರ್ತರಿಗಾಗಿ ಮನೆ ಮನೆಯನ್ನೂ ಶೋಧಿಸಿದರು. ಮನೆಯಲ್ಲಿ ಮಲಗಿದ್ದ ಟಿ.ವಿ. ಕುಂಜಂಬು ಮತ್ತು ಟಿ.ವಿ.ಕುನ್ಹಿರಾಮನ್‌ರವರನ್ನು ಕಸ್ಟಡಿಗೆ ತೆಗೆದುಕೊಳ್ಳಲಾಯಿತು. ನದಿ ತೀರದಲ್ಲಿ ಮಲಗಿದ್ದ ಸಂಗಾತಿಗಳನ್ನು ಪೋಲೀಸರು ಬಡಿದರು. ಅನೇಕರಿಗೆ ಗಾಯಗಳಾದವು. ನಿದ್ರೆಯಲ್ಲಿದ್ದುದರಿಂದ ಆ ಸಂಗಾತಿಗಳು ಧಾಳಿಯನ್ನು ಎದುರಿಸಲು ಸಾಧ್ಯವಾಗಲಿಲ್ಲ. ಆ ಸಮಯದಲ್ಲಿ ನಾನು ಕಾರ್ಮಿಕರನ್ನು ಭೇಟಿಯಾಗಲು ಅವರ ಮನೆಗಳಿಗೆ ಹೋಗಿದ್ದೆನು. ಚಹಾ ಅಂಗಡಿಯ ಬಳಿ ಸಿಕ್ಕಿದ ಇಬ್ಬರು ಸಂಗಾತಿಗಳನ್ನು ಕರೆದುಕೊಂಡು ಪೋಲೀಸರು ಹೊರಟರು. ಕೆ. ಪಿ. ವೆಲ್ಲುಂಗ ಸೇರಿದಂತೆ ಅನೇಕ ಸಂಗಾತಿಗಳನ್ನು ಪೋಲೀಸರು ಥಳಿಸಿದ್ದರು.

ಬೆಳಗಾಗುವ ವೇಳೆಗೆ ಪೋಲೀಸರು ಧಾಳಿ ನಡೆಸಿ ದೌರ್ಜನ್ಯವೆಸಗಿದ ಸುದ್ದಿಯು ದೇಶದಾದ್ಯಂತ ಹರಡಿತು. ಜನರು ರೊಚ್ಚಿಗೆದ್ದರು. ಸಂಘದ ಕಾರ್ಯಕರ್ತರು ಕಯ್ಯೂರು ಸೆಂಟ್ರಲ್ ಬಳಿ ಸೇರಿದರು. ಅವರು ಮುಂದಿನ ಯೋಜನೆಗಳ ಬಗ್ಗೆ ಚರ್ಚಿಸಿದರು. ಸಂಜೆ ಕೂಕ್ಕಂಡಮ್‌ನಲ್ಲಿ ಒಂದು ಬಹಿರಂಗ ಸಭೆಯನ್ನು ನಡೆಸಲು ತೀರ್ಮಾನಿಸಲಾಯಿತು. ರೈತ ಸಂಘದ ಕಾರ್ಯಕಾರಿ ಸಮಿತಿ ಸಭೆ ಸೇರಿ ಪೋಲೀಸರು ನಡೆಸಿದ ದೌರ್ಜನ್ಯ ಮತ್ತು ಬಂಧನವನ್ನು ಪ್ರತಿಭಟಿಸಿ ಪ್ರದರ್ಶನ ಮತ್ತು ಬಹಿರಂಗ ಸಭೆಯನ್ನು ನಡೆಸಲು ತೀರ್ಮಾನಿಸಿತು. ಕ್ಲಾಯಿಕೋಡ್ ಮತ್ತು ಪಳಯಿ ಮುಂತಾದ ಸ್ಥಳಗಳಲ್ಲಿನ ಜನರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಕರೆ ನೀಡಲಾಯಿತು. ಎಲ್ಲಾ ದಿಕ್ಕುಗಳಿಂದ ದೊಡ್ಡ ಗುಂಪುಗಳಲ್ಲಿ ಜನರು ಬಂದು ಪ್ರದರ್ಶನಕ್ಕೆ ಸೇರಿದರು. ಕಯ್ಯೂರು ಕೂಕ್ಕಂಡಮ್‌ನಿಂದ ಸಂಜೆ 4 ಗಂಟೆಯ ವೇಳೆಗೆ ಚೆರಿಯಕ್ಕರಕ್ಕೆ ಮೆರವಣಿಗೆಯು ಹೊರಟಿತು. ಕೆಂಬಾವುಟಗಳನ್ನು ಹೊತ್ತು ಸ್ಫೂರ್ತಿಯುತ ಘೋಷಣೆಗಳೊಂದಿಗೆ ಮೆರವಣಿಗೆಯು ಮುನ್ನಡೆಯಿತು. ಮೆರವಣಿಗೆಯು ಹೆಂಡದ ಅಂಗಡಿಯ ಬಳಿ ಬಂದಾಗ ಸುಬ್ರಾಯನ್ ಎಂಬ ಪೋಲೀಸ್ ಪೇದೆ ಚಾಕು ಹಿಡಿದು ಅಂಗಡಿಯಿಂದ ಹೊರಗೆ ಬಂದನು. ಈ ಪೋಲೀಸ್ ಪೇದೆಯು ಹಿಂದೆ ನಡೆದಿದ್ದ ಧಾಳಿ ಮತ್ತು ದೌರ್ಜನ್ಯಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದನು. ಈ ಪೇದೆಯ ವಕ್ರದೃಷ್ಟಿ ಮತ್ತು ಹಾವಭಾವಗಳು ರೈತರನ್ನು ರೊಚ್ಚಿಗೆಬ್ಬಿಸಿತು. ಯಾರೋ ಕೆಲವು ಸಂಗಾತಿಗಳು ಪೇದೆಯ ಕೈಯಲ್ಲಿದ್ದ ಚಾಕುವನ್ನು ಕಿತ್ತುಕೊಂಡು ಅವನನ್ನು ಹೊಡೆಯಲು ಸಿದ್ಧರಾಗಿದ್ದರು. ಕೆಲವು ಹಿರಿಯ ಸಂಗಾತಿಗಳು ಮಧ್ಯೆ ಪ್ರವೇಶಿಸಿ ಅವರನ್ನು ತಡೆದರು.

ಈ ಕ್ರೂರ ಪೇದೆಯನ್ನು ಸುಲಭವಾಗಿ ಬಿಟ್ಟುಬಿಡಬಾರದೆಂದು ಎಲ್ಲರೂ ಒಪ್ಪಿದರು. ಸುಬ್ರಾಯನ ಕೈಯಲ್ಲಿ ಕೆಂಬಾವುಟವನ್ನು ಕೊಟ್ಟು ಮೆರವಣಿಗೆಯ ಮುಂದಾಳತ್ವ ವಹಿಸುವಂತೆ ಮಾಡಬೇಕೆಂದು ಎಲ್ಲರೂ ಅವಿರೋಧವಾಗಿ ಒಪ್ಪಿದರು. ಬೇರೇನೂ ದಾರಿ ಕಾಣದೆ ಅವನು ಕೆಂಬಾವುಟ ಹಿಡಿದು ಮೆರವಣಿಗೆಯ ಮುಂದೆ ನಡೆಯಲು ಪ್ರಾರಂಭಿಸಿದನು. ಈ ದೃಶ್ಯವನ್ನು ನೋಡಿ ಜನರು ನಗುತ್ತಾ ಪೋಲೀಸರ ಬಗ್ಗೆ ತಮಾಷೆ ಮಾಡುತ್ತಿದ್ದರು. ಚೆರಿಯಕ್ಕರ ಮತ್ತು ಕಯ್ಯೂರಿನ ನಡುವೆಯಿದ್ದ ಗುಡ್ಡಗಳ ಸಾಲಿನಲ್ಲಿ ನಾವು ನಡೆಯುತ್ತಾ ಹೋದೆವು. ನಾವು ಕಯ್ಯೂರು ಸೆಂಟ್ರಲ್‌ನ್ನು ಸಮೀಪಿಸಿದೆವು.

ಅಲ್ಲಿ ಸೇರಿದ್ದ ಸಹಸ್ರಾರು ಜನರ ನಡುವೆ ತಾನು ಅವಮಾನಿತನಾಗುವೆನೆಂದು ಯೋಚಿಸಿದ ನಂತರ ಪೋಲೀಸ್ ಪೇದೆಯ ವರ್ತನೆ ಬದಲಾಯಿತು. ಓಡಿ ಹೋಗಿ ತಪ್ಪಿಸಿಕೊಳ್ಳುವುದು ಕಷ್ಟಕರವಾಗಿತ್ತು. ಒಂದು ಭಾಗಕ್ಕೆ ಏರಲು ದುಸ್ಸಾಧ್ಯವಾದ ಕಡಿದಾದ ಬೆಟ್ಟ, ಮತ್ತೊಂದು ಭಾಗಕ್ಕೆ ಹರಿಯುತ್ತಿದ್ದ ನದಿಯು ತಪ್ಪಿಸಿಕೊಳ್ಳಲು ಅಡ್ಡಿಯನ್ನೊಡ್ಡಿತ್ತು. ಹಿಂಭಾಗದಲ್ಲಿ ಮೆರವಣಿಗೆ ಬರುತ್ತಿದ್ದುದರಿಂದ ಅವನು ಬೇರೆ ದಾರಿಯಿಲ್ಲದೆ ಬಾವುಟವನ್ನಿಡಿದು ಮುಂದೆ ಓಡಲಾರಂಭಿಸಿದನು. ನಮ್ಮ ಸಂಗಾತಿಗಳು ಅವನ ಬೆನ್ನಟ್ಟಿದರು. ಹೇಗೆಯೋ ಅವರು ಸುಮಾರು ಅರ್ಧ ಕಿಲೋ ಮೀಟರ್ ದೂರ ಓಡುವ ವೇಳೆಗೆ ಕ್ಲಾಯಿಕೋಡ್‌ನಿಂದ ಬರುತ್ತಿದ್ದ ಮೆರವಣಿಗೆಯುಎದುರಾಯಿತು. ಪೋಲೀಸ್ ಪೇದೆಯು ಮಧ್ಯೆ ಸಿಕ್ಕಿಬಿದ್ದನು. ಅವನ ಬಳಿ ಹೋದ ಸ್ವಯಂ ಸೇವಕರನ್ನು ಬಾವುಟದ ಕೋಲಿನಿಂದ ಹೊಡೆಯಲಾರಂಭಿಸಿದನು. ಹೆಚ್ಚಿನ ಸಂಖ್ಯೆಯಲ್ಲಿ ಎರಡೂ ಭಾಗಗಳಿಂದ ಸ್ವಯಂ ಸೇವಕರು ಅವನನ್ನು ಮುತ್ತಲು ಹೊರಟಾಗ ಅತನು ಓಡಿ ಹೋಗಿ ನದಿಯಲ್ಲಿ ಹಾರಿದನು. ಭಾರವಾಗಿದ್ದ ಅತನ ಸಮವಸ್ತ್ರ ಅತನನ್ನು ನದಿಯ ತಳಕ್ಕೆ ಎಳೆದೊಯ್ದಿತು. ಅವನು ಮುಳುಗುತ್ತಿದ್ದಾನೆಂದು ಯಾರಿಗೂ ತಿಳಿಯಲಿಲ್ಲ. ತಪ್ಪಿಸಿಕೊಳ್ಳಲು ಅತನು ನದಿಗೆ ಜಿಗಿದಿದ್ದಾನೆಂದು ಅವರು ಬಗೆದರು. ಎರಡು ದಿನಗಳ ನಂತರ ಅತನ ಶವವು ಕಾರಿಯಂಗೊಟ್ಟ ಸೇತುವೆ ಬಳಿ ತೇಲುತ್ತಿತ್ತು.

ಆ ರಾತ್ರಿ ಪಕ್ಷದ ಕಾರ್ಯಕಾರಿ ಸಮಿತಿಯು ಸಭೆ ಸೇರಿ ಮುಂದಿನ ಕಾರ್ಯಕ್ರಮದ ಬಗ್ಗೆ ಚರ್ಚಿಸಿತು. ಪೋಲೀಸ್ ಆಡಳಿತವು ಜಾರಿಯಾಗಬಹುದೆಂದು ನಾವೆಲ್ಲಾ ನಿರೀಕ್ಷಿಸಿದ್ದೆವು. ನಾನು ಆ ಪ್ರದೇಶದಲ್ಲೇ ಭೂಗತನಾಗಿ ಮುಂದುವರಿಯಲು ತೀರ್ಮಾನಿಸಿದೆ. ನಾನು ಒಬ್ಬ ರೈತನ ಮನೆಯಲ್ಲಿ ಅಡಗಿಕೊಳ್ಳಲು ಹೋದೆನು. ನಾನಿರುವಲ್ಲಿಗೆ ಎಲ್ಲಾ ಸುದ್ದಿಗಳೂ ತಕ್ಷಣ ತಲುಪುವಂತೆ ವ್ಯವಸ್ಥೆ ಮಾಡಲಾಯಿತು.

ಕಾರಿಯಂಗೊಟ್ಟ ನದಿಯಲ್ಲಿ ಪೋಲೀಸ್ ಪೇದೆಯ ಶವವು ತೇಲಿದ ಮೂರು ದಿನಗಳ ಬಳಿಕ ಕಯ್ಯೂರಿಗೆ ಮೀಸಲು ಪಡೆಯ ಪೋಲೀಸರು ಮತ್ತು ವಿಶೇಷ ಪೋಲೀಸ್ ದಳದವರೂ ಬಂದರು. ಪೋಲೀಸರ ಅತ್ಯಾಚಾರದಿಂದ ಪಾರಾಗಲು ಸ್ತ್ರೀಯರೆಲ್ಲಾ ನೆರೆಹೊರೆಯ ಹಳ್ಳಿಗಳಲ್ಲಿದ್ದ ತಮ್ಮ ಸಂಬಂಧಿಗಳ ಮನೆಗೆ ಓಡಿ ಹೋದರು. ಪೋಲೀಸರು ಪ್ರತಿಯೊಂದು ಮನೆಯ ಮೇಲೂ ಧಾಳಿ ಮಾಡಿದರು. ಪಾಸಿದ್ದ ಮನೆಗೂ ಬಂದರು. ಅನೇಕ ಗುಡಿಸಲುಗಳನ್ನು ಉರುಳಿಸಿ ಬೆಂಕಿಯಿಟ್ಟರು. ಕಯ್ಯೂರು ಪೋಲೀಸರ ದೌರ್ಜನ್ಯದ ಭಯಾನಕ ರಣರಂಗವಾಯಿತು.

ಹದಿನೈದು ದಿನಗಳ ಕಾಲ ಪೋಲೀಸರು ಕಯ್ಯೂರು ಗ್ರಾಮವನ್ನು ಎಲ್ಲಾ ಕಡೆಗಳಿಂದಲೂ ಸುತ್ತುವರಿದರು. ನಾವು ಪಶ್ಚಿಮ ಎಲೆರಿಯಲ್ಲಿದ್ದಾಗ ಒಬ್ಬ ಸಂಗಾತಿ ಹೇಳಿದರು. "ನೀವು ಇಲ್ಲಿರುವ ಸುಳಿವು ಪೋಲೀಸರಿಗೆ ಸಿಕ್ಕಹಾಗಿದೆ. ಅವರು ನಮ್ಮ ಕಡೆಯೇ ಬರುತ್ತಿದ್ದಾರೆ." ನಾವಲ್ಲಿ ಹನ್ನೆರಡು ಮಂದಿ ಇದ್ದೆವು. ನಾವು ಎಲ್ಲಿ ಹೋಗಲು ಸಾಧ್ಯ ಎಂಬುದೇ ತಿಳಿಯಲಿಲ್ಲ. ಎಲ್ಲ ಕಡೆಗಳಿಂದಲೂ ಪೋಲೀಸರು ಸುತ್ತುವರಿದಿದ್ದರು. ಬೇರೆ ಬೇರೆ ಮನೆಗಳಿಂದ ನಾವು ಒಬ್ಬೊಬ್ಬರಾಗಿ ಬಂದು ಒಂದೆಡೆ ಸೇರಿದ್ದೆವು. ಪಶ್ಚಿಮ ಎಲೆರಿ ಕಾಡಿನ ಗಡಿಯಲ್ಲೇ ಕಯ್ಯೂರು ಗ್ರಾಮವಿದ್ದುದು. ಕಾಡು ಬಹಳ ದಟ್ಟವಾಗಿದ್ದು ದುರ್ಗಮವಾಗಿತ್ತು. ಈ ಕಾಡಿನಲ್ಲೇಕೆ ಅಡಗಿಕೊಳ್ಳಬಾರದೆಂಬ ಆಲೋಚನೆ ಹೊಳೆಯಿತು. "ನಾವೇಕೆ ಕಾಡಿನೊಳಗೆ ಹೋಗಬಾರದು ?" ಎಂದು ನಾನು ಸಲಹೆ ಮಾಡಿದೆ.

"ಹೌದು. ಇದು ಬಹಳ ಒಳ್ಳೆಯ ಸಲಹೆ" ಎಂದು ಮತ್ತೊಬ್ಬ ಸಂಗಾತಿ ಒಪ್ಪಿಕೊಂಡರು.

ಮಧ್ಯ ರಾತ್ರಿಯ ವೇಳೆಗೆ ನಾವು ಪಶ್ಚಿಮ ಎಲೆರಿ ಕಾಡಿನೆಡೆಗೆ ಹೊರಟೆವು. ನನ್ನ ಸಂಗಾತಿಗಳ ಹೆಸರುಗಳನ್ನು ನಾನಿಲ್ಲಿಬಹಿರಂಗಪಡಿಸುವುದಿಲ್ಲ. ಅವರಲ್ಲಿ ಕೆಲವರು ಸತ್ತು ಹೋಗಿದ್ದಾರೆ. ಕೆಲವರು ಬದುಕಿದ್ದಾರೆ. ಬೆಳಕಿಲ್ಲದೆ ಕಾಡಿನೊಳಗೆ ನಡೆಯುವುದು ಸುಲಭ ಸಾಧ್ಯವಾಗಿರಲಿಲ್ಲ. ಕಲ್ಲು-ಮುಳ್ಳುಗಳು, ತಗ್ಗು-ದಿಣ್ಣೆಗಳಿಂದಲೇ ಕೂಡಿದ ದಾರಿಯದಾಗಿತ್ತು. ಇದರ ಜೊತೆಗೆ ರಕ್ತವನ್ನು ಹೀರುವ ಜಿಗಣೆಗಳ ಕಾಟ ಬೇರೆ. ನಮ್ಮಲ್ಲಿ ಪ್ರತಿಯೊಬ್ಬರ ಬಳಿಯೂ ಬಟ್ಟೆ, ಬೀಡಿ-ಬೆಂಕಿ ಪೆಟ್ಟಿಗೆ ಮತ್ತು ಎಲೆ-ಅಡಿಕೆಯ ಕಟ್ಟೊಂದು ಇತ್ತು. ಇಬ್ಬರ ಬಳಿ ಛತ್ರಿಗಳೂ ಇದ್ದವು.

ಕಾಡಿನಲ್ಲಿ ನಮ್ಮ ಪ್ರಯಾಣ ಸಾಗಿತು. ಒಬ್ಬ ಸಂಗಾತಿ ಮುಂದೆ ನಡೆದರು. ನಾವು ಆತನನ್ನು ಹಿಂಬಾಲಿಸುತ್ತಾ ನಡೆದೆವು. ನಾವೆಲ್ಲಾ ಒಂದು ಅಗಲವಾದ ಬಂಡೆ ಕಲ್ಲಿನ ಮೇಲೆ ವಿಶ್ರಮಿಸಿದೆವು. ನಮ್ಮ ಮುಂದೆ ನಡೆಯುತ್ತಿದ್ದ ಸಂಗಾತಿ ಹಿಂತಿರುಗಿ ಹೋದರು. ನಾವು ಆ ಕಲ್ಲಿನ ಮೇಲೆಯೇ ನಿದ್ರೆಹೋದೆವು. ನಮ್ಮಲ್ಲಿ ಒಬ್ಬೊಬ್ಬರು ಕಾವಲು ಕುಳಿತಿರುತ್ತಿದ್ದೆವು ಬೆಳಗಾಯಿತು. ಸುತ್ತಮುತ್ತಲೂ ದುರ್ಗಮವಾದ ಕಾಡು ಆವರಿಸಿತ್ತು. ನಮ್ಮಲ್ಲಿ ಕೆಲವರು ಎಚ್ಚರಿಕೆಯಿಂದ ಬಂಡೆ ಕಲ್ಲಿನಿಂದ ಕೆಳಗೆ ಇಳಿದೆವು. ಸಮೀಪದಲ್ಲೇ

(7ನೇ ಪುಟ ನೋಡಿ)

ಕರ್ನಾಟಕ ರಾಜ್ಯದಲ್ಲಿ

ತುಂಬಿ ಹರಿಯುವ ಕಾವೇರಿ-ಕೃಷ್ಣೆಯರು-ಬಾಡಿ ಬೆಂಡಾದ ಬದಿಯ ಬೆಳೆಗಳು

—ಎನ್ಕೆ

ಕಳೆದ 25 ವರ್ಷಗಳಿಂದಲೂ ಕುಂಟುತ್ತಾ ಸಾಗಿರುವ ಕೃಷ್ಣಾ ಮೇಲ್ದಂಡೆ ಯೋಜನೆಯ ನಾರಾಯಣಪುರ ಅಣೆಕಟ್ಟು ಮುಕ್ತಾಯಗೊಂಡ ನಾಲ್ಕು ತಿಂಗಳ ನಂತರ ಮುಖ್ಯಮಂತ್ರಿ ಗುಂಡೂರಾಯರು ತುಂಬಿತುಳುಕುತ್ತಿರುವ ನಾರಾಯಣಪುರ ಅಣೆಕಟ್ಟಿನಿಂದ ಗುಲ್ಬರ್ಗ ಜಿಲ್ಲೆಯ ಶಹಾಪುರ ತಾಲ್ಲೂಕಿನ ರೈತರಿಗೆ ನೀರು ಬಿಡುಗಡೆ ಮಾಡಲಾಯಿತೆಂದು ಕಳೆದ ತಿಂಗಳು ಕೊನೆ ವಾರದಲ್ಲಿ ವಿಜೃಂಭಣೆಯಿಂದ ಸಾರಿದರು. ಇದೇ ವರ್ಷ ಜುಲೈ ತಿಂಗಳಲ್ಲಿ ನೀರಾವರಿ ಮಂತ್ರಿ ಚಿಮ್ಮನಕಟ್ಟಿಯವರು 32,000 ಎಕ್ರೆ ಭೂಮಿಗೆ ನೀರುಣಿಸಲಾಗುವುದೆಂದು ಹೇಳಿದ್ದರು. ಗುಂಡೂರಾಯರು ಬಿಟ್ಟ ನೀರು ಒಂದಂಗುಲ ಭೂಮಿಯನ್ನೂ ತಣಿಸಲಿಲ್ಲ. ಮೊನ್ನೆ ನಾನು ಆ ಭಾಗದಲ್ಲಿ ಸಂಚರಿಸಿದಾಗ, ಅಧಿಕಾರಿಗಳು ಹೇಳಿದ ನಿಜ ಮಾತು "ಇದೆಲ್ಲ ಪ್ರಚಾರ ಸ್ವಾಮಿ. ಚುನಾವಣೆ ಬಂತು. ಪೇಪರ್ ಪ್ರಚಾರಬೇಕು. ಗುಂಡೂರಾಯರು ಬಿಟ್ಟ ನೀರು ಕಣ್ಣಿಗೆ ಕಾಣಿಸುವಷ್ಟೇ ದೂರ ಹೋಯಿತಲ್ಲದೆ, ಮುಂದೆ ಹರಿಯಲಿಲ್ಲ. ಅಲ್ಲಿ ಕಾಲುವೆಗೆ ಬಾಂದ ಹಾಕಲಾಗಿದೆ." ಅವರು ಮತ್ತೆ ಹೇಳಿದ ಮಾತೆಂದರೆ, "ಭೂಮಿಯನ್ನು ಸಮಪಾತಳ ಮಾಡಬೇಕು. ನೀರಾವರಿ ಪ್ರದೇಶದಲ್ಲಿ ಭೂಮಿಯನ್ನು ಸಮಮಾಡಿ, ಸಣ್ಣ ಕಾಲುವೆಗಳಾಗಬೇಕು. ಈ ಕೆಲಸಕ್ಕೆ ವಿಶ್ವ ಬ್ಯಾಂಕ್ ಹಣ ನೀಡಿದೆ, ಏಜನ್ಸಿಯನ್ನೂ ನೇಮಿಸಿದೆ. ಅಣೆಕಟ್ಟು ಕಟ್ಟುವಾಗಲೇ, ಕಾಲುವೆಗಳ ವ್ಯವಸ್ಥೆ ಭೂಮಿ ಸಂಪಡಿಸುವ ಕೆಲಸ, ರೈತರಿಗೆ ಹಣದ ವ್ಯವಸ್ಥೆ, ನೀರಾವರಿ ಬೆಳೆ ಬೆಳೆಯಲು ಸರಿಯಾದ ಶಿಕ್ಷಣ—ಇವುಗಳೆಲ್ಲ ಏಕಕಾಲದಲ್ಲೇ ನಡೆದರೆ ಮಾತ್ರ ಕೋಟ್ಯಾವಧಿ ರೂಪಾಯಿ ಖರ್ಚು ಮಾಡಿ ಕಟ್ಟಿದ ಅಣೆಕಟ್ಟಿನ ನೀರು ಸಕಾಲದಲ್ಲೇ ಸದುಪಯೋಗವಾಗಲು ಸಾಧ್ಯ. ಬಂಡವಾಳಶಾಹಿ ಸರಕಾರದಿಂದ ಅಂಥ ಸಂಯೋಜನೆ ಸಾಧ್ಯವಿಲ್ಲ ಅದು ಸಮತಾವಾದಿ ದೇಶಗಳಲ್ಲಷ್ಟೇ ಸಾಧ್ಯ. ಮುಖ್ಯ ಮಂತ್ರಿಗಳು ಬಿಟ್ಟ ನೀರು ಕಾಲುವೆಯಲ್ಲೇ ಉಳಿದಿದೆ. ಭೂಮಿ ಸೇರಲಿಲ್ಲ". ಕೃಷ್ಣೆ ತುಂಬಿ ಹರಿಯುತ್ತಾಳೆ; ಕೃಷ್ಣಾದಂಡೆಯ ಭೂಮಿಯಲ್ಲಿ ಬೆಳೆಗಳು ಒಣಗುತ್ತಿವೆ. ಇನ್ನು ಕಾವೇರಿಯತ್ತ ತಿರುಗೋಣ. ಹಾಸನ ಜಿಲ್ಲೆಯ ನೈಋತ್ಯದ ಹಳ್ಳಿಗಳ ಹೊಸ್ತಿಲಿಗೇ ಬಂದು ನಿಂತಿದ್ದಾಳೆ ಕಾವೇರಿ. ಮೂರು ಸಾವಿರ ಎಕ್ರೆ ಭೂಮಿಗೆ ಕಾವೇರಿ ನೀರು ಹರಿಯಬೇಕಾಗಿತ್ತು. ಅರಕಲಗೂಡಿನ ಹತ್ತಿರ ಕಟ್ಟೆಪುರದ ಕಟ್ಟೆ ಕಟ್ಟಿ ಹಲವಾರು ವರ್ಷವಾಯಿತು. ಕಟ್ಟೆಯು ತುಂಬಿ ನಿಂತ ನೀರು ಹೊರನುಗ್ಗುತ್ತಲಿದೆ. ಹದಿನೇಳು ಮೈಲು ಭರದಿಂದ ಸಾಗುತ್ತಿದೆ. ಅನಂತರ ಅದು ಚೆಲ್ಲಾಪಿಲ್ಲಿ. ಹೊಲಗಳಿಗೆ ನೀರು ಪೂರೈಸುವ ಕಾಲುವೆಗಳು ಒಣಗಿ ಹೋಗಿವೆ. ಭೂಮಿ ರಣ ರಣವೆನ್ನುತ್ತಿದೆ. ಅಧಿಕಾರಿಗಳ ಅಸಡ್ಡೆಯಿಂದಾಗಿ ನೀರಿಗಾಗಿ ಬಾಯ್ತೆರೆದು ನಿಂತಿರುವ ಭೂಮಿಯನ್ನು ಸೋಕದೆ ಕಾವೇರಿ ನೀರು ಚೆಲ್ಲಿ ಹೋಗುತ್ತಿದೆ.

ತುಂಗೆಯ ಹಣೆಬರಹವೂ ಇದೇ. ಪೂರೈಕೆ ಕಾಲುವೆಗಳು ಸಕಾಲದಲ್ಲಿ ರಿಪೇರಿಯಾಗದೆ ರೈತರಿಗೆ ನೀರು ಸಿಗುತ್ತಿಲ್ಲ. ತಕರಾರುಗಳ ಸುರಿಮಳೆಯೇ ಸುರಿಸಲಾಯಿತು. ಆದರೆ ಬಂಡೇಕಲ್ಲಿನ ಬಂಟ ಸರಕಾರವಾಗಲೀ, ಅಧಿಕಾರಿಗಳಾಗಲೀ ಅಲುಗಾಡುತ್ತಿಲ್ಲ. ಕಾರಣ ಅಣೆಕಟ್ಟುಗಳ ಮೂಲಕ ನೀರು ತಡೆಹಿಡಿಯಲಾಗಿದೆ, ಆದರೆ ಅದು ಹೊಲ ಸೇರುತ್ತಿಲ್ಲ. ಬಂಡವಾಳಶಾಹಿ ವರ್ಗದ ಸರಕಾರದ ನೀರಾವರಿ ಯೋಜನೆಗಳಿವು. ಕುಂಭಕರ್ಣಾವಸ್ಥೆಯಲ್ಲೇ ಇವೆ. ರೈತರು ಇವರನ್ನು ಕುಂಭಕರ್ಣ ನಿದ್ರೆಯಿಂದ ಎಬ್ಬಿಸಬೇಕು. ಸಂಘಟಿತರಾಗಿ ಹೋರಾಡಬೇಕು. ರೈತರೆಲ್ಲ ಒಂದಾಗಿರಿ—ನೀರಿಗಾಗಿ ಹೋರಾಡಿರಿ. ರೈತರ ಹಿತಸಾಧಿಸುವ ಸರಕಾರಕ್ಕಾಗಿ ದುಡಿಯಿರಿ. ಆದರ ಸಾಧನೆಗಾಗಿ ಎಡ ಮತ್ತು ಪ್ರಜಾಪ್ರಭುತ್ವರಂಗ ಬಲಗೊಳಿಸಿರಿ.

ಯಾವುದಕ್ಕೂ ಕೊರತೆಯಿಲ್ಲ, ಕೆಲಸಮಾತ್ರ ಆಗುತ್ತಿಲ್ಲ,

ವರ್ಷಾಂತ್ಯದೊಳಗೆ ರೈತರಿಗೆ ರೂ. 300 ಕೋಟಿ ರಿಯಾಯ್ತಿ ನೀಡಲಾಗುವುದೆಂದು ಮುಖ್ಯ ಮಂತ್ರಿ ಗುಂಡೂರಾಯರು ಬಿಜಾಪುರ ಜಿಲ್ಲೆಯ ಇಂಡಿಯಲ್ಲಿ 9 ಕೆ. ಜಿ. ಬೆಳ್ಳಿಯ ಪಂಪು ಸೆಟ್ಟನ್ನು ಸ್ವೀಕಾರ ಮಾಡುತ್ತ ಹೇಳಿದರು. ರೈತರ ಸಮಸ್ಯೆಗಳನ್ನು ಸ್ನೇಹ ಭಾವದಿಂದ ಹಾಗೂ ಪರಸ್ಪರ ತಿಳುವಳಿಕೆಯಿಂದ ಬಗೆಹರಿಸಲಾಗುವುದೆಂದು ಹೇಳಿದ್ದಾರೆ. ಈ "ಸ್ನೇಹ" ಮತ್ತು "ತಿಳುವಳಿಕೆ" ಎಂಥದ್ದೆಂಬುದನ್ನು 1980 ನರಗುಂದ ನರಹತ್ಯೆಯಿಂದ ಹಿಡಿದು ದೊಡ್ಡಹಳ್ಳಿ ಗೋಳಿಬಾರಿನವರಿಗೆ 100ಕ್ಕೂ ಮೇಲ್ಪಟ್ಟು ರೈತರು ಪೋಲೀಸರು "ತಿಳುವಳಿಕೆ"ಯಿಂದ ಹೊಡೆದ "ಸ್ನೇಹ"ದ ಗುಂಡಿಗೆ ಆಹುತಿಯಾಗಿರುವುದರಿಂದ ಕಾಣಬಹುದು. ನರಗುಂದ ಬಂಡಾಯ ನಡೆದ ಹಿನ್ನೆಲೆಯಲ್ಲಿ ರೈತರ ಹೆಣ ಬಿದ್ದನಂತರ 5 ಎಚ್.ಪಿ. ಪಂಪು ಸೆಟ್ಟಿಗೆ ವಿನಾಯಿತಿ, ಹತ್ತು ಲಕ್ಷ ರೈತರು ಹೋದ ವರ್ಷ ಫೆಬ್ರವರಿ 6—7 ರಂದು ವಿಧಾನ ಸೌಧಕ್ಕೆ ಲಗ್ಗೆ ಹೊಡೆದಾಗ 10 ಎಚ್.ಪಿ.ಗೆ ವರ್ಷಕ್ಕೆ ರೂ. 500 ವಿನಾಯತಿ ದೊರಕಿತು. ತಮ್ಮ ಐಕ್ಯ ಹೋರಾಟ, ಬಲಿದಾನದಿಂದ ಈ ಸವಲತ್ತು ದೊರೆತಿವೆಯಲ್ಲದೆ, ಸ್ನೇಹ, ತಿಳುವಳಿಕೆಯಿಂದಲ್ಲವೆಂಬ ಸತ್ಯ ಸಂಗತಿ ರೈತರಿಗೆ ಗೊತ್ತು. ಅದೇ ಸಮಯದಲ್ಲಿ 90 ಲಕ್ಷ ರೂ. ರೈತರಿಗೆ ವಿನಾಯಿತಿ ಘೋಷಿಸಲಾಗಿತ್ತು. ಬಡ ಮಧ್ಯಮ ರೈತರಿಗೆ ಈ 90 ಲಕ್ಷ ರೂ.ನ 1 ನಯಾ ಪೈಸಾ ಸಿಕ್ಕಿಲ್ಲ. ಅದರ ಲಾಭ ಪಡೆದವರು ಸಿರಿವಂತ ರೈತರು ಮತ್ತು ಹಿರಿಯ ಭೂಮಾಲಿಕರು ಮಾತ್ರ. ಇಂಡಿ ತಾಲ್ಲೂಕಿನ ಸಿರಿವಂತ ರೈತರಿಂದ ಹಣ ಕೂಡಿಸಿ ಗುಂಡೂರಾಯರಿಗೆ ಬೆಳ್ಳಿ ಪಂಪು ಸೆಟ್ ಅರ್ಪಿಸಿದಾಗ 300 ಕೋಟಿ ರೂ. ರಿಯಾಯ್ತಿ ಘೋಷಿಸಲ್ಪಟ್ಟಿತು. ಈ ರಿಯಾಯ್ತಿ ಯಾರಿಗೆ ಯಾವ ರೀತಿಯಲ್ಲಿ ಲಭ್ಯವಾಗುತ್ತದೆ ಎಂಬುದರ ವಿವರ ಸಿಕ್ಕಿಲ್ಲ. ವಿವರ ಸಿಗುವುದೂ ಇಲ್ಲ. ವಿವರ ತಿಳಿಸಿದರೆ ಗುಟ್ಟು ರಟ್ಟಾಗುತ್ತದೆ. ಬುದ್ಧಿವಂತ ಮಂತ್ರಿಗಳು, ವಿವರ ಕೊಟ್ಟು ವಿಹರಿಸುವುದಕ್ಕಿಂತ ರಿಯಾಯ್ತಿಯ ದಾರಿ ನೋಡುತ್ತ ತಮ್ಮ ಮತವನ್ನು "ಹಸ್ತಕ್ಕೆ" ನೀಡಿ ಬೆಳ್ಳಿ ಕುರ್ಚಿಯ ಮೇಲೆ ಆಸೀನರಾಗಲು ಅವಕಾಶಮಾಡಿ ಕೊಟ್ಟರೆ 300 ಕೋಟಿಯ ಬದಲಾಗಿ 3000 ಕೋಟಿಯ ಆಶ್ವಾಸನೆ ನೀಡಲು ಯಾವ ಮಂತ್ರಿಯೂ ಹಿಂಜರಿಯುವುದಿಲ್ಲ. ಆಶ್ವಾಸನೆಗಳಿಂದ ರೈತರನ್ನು ತಪ್ಪು ದಾರಿಗೆಳೆಯಬಹುದೆಂದು ಯಾವ ಮಂತ್ರಿಯಾಗಲಿ ತಿಳಿದಿದ್ದರೆ ಅದು ತಪ್ಪು. ಸಂಘಟಿತ ರೈತ ಸಂಘಗಳಿದ್ದಲ್ಲಿ "ಜನಮರುಳೋ ಜಾತ್ರೆ ಮರುಳೋ" ಆಗುವುದಿಲ್ಲ. ಎಡಪಕ್ಷಗಳು ಮತ್ತು ರೈತ ಸಂಘದಂತ ಸಾಮೂಹಿಕ ಸಂಘಟನೆಗಳು ಗುರುತರವಾದ ಜವಾಬ್ದಾರಿಯನ್ನು ಹೊರಬೇಕಾಗಿದೆ. ಹಳ್ಳಿಗಾಡಿನ ರೈತರೆಲ್ಲ ಇನ್ನೂ ಮೂಢ ನಂಬಿಕೆಯಲ್ಲಿ ಮುಳುಗಿದ್ದಾರೆ. ಆದ್ದರಿಂದ ಅವರನ್ನೆಬ್ಬಿಸಿ, ಹೊಸ ವಿಚಾರ ಸರಣಿಯನ್ನು ಅವರ ತಲೆಯಲ್ಲಿ ತುಂಬಿ, ಹೋರಾಟದ ಮೂಲಕ ಹೊಸ ಅನುಭವ ಪಡೆಯುವಂತೆ ಚಾಲನೆಕೊಡುವ ಜವಾಬ್ದಾರಿ ಎಡ ಪಕ್ಷಗಳದ್ದಾಗಿರುತ್ತದೆ. ಈ ಜವಾಬ್ದಾರಿಯನ್ನು ಪೂರೈಸಲು ತ್ವರಿತಕ್ರಮ ಕೈಗೊಳ್ಳುವುದಗತ್ಯ.

ಹೆಚ್ಚು ಆಹಾರ ಧಾನ್ಯ ಉತ್ಪಾದನೆಯ ಅವಕಾಶ ಉಪಯೋಗಿಸಲ್ಪಡುತ್ತಿಲ್ಲ

ನಮ್ಮ ದೇಶದಲ್ಲಿರುವ ಭೂಮಿ ಮತ್ತು ನೀರನ್ನು ಸರಿಯಾಗಿ ಉಪಯೋಗಿಸಿದ್ದಾದರೆ, ಭಾರತ ದೇಶ ಜಗತ್ತಿನ ಕಣಜವಾಗಬಲ್ಲದೆಂದು ಕೇಂದ್ರ ಕೃಷಿ ಮಂತ್ರಿ ಬಿರೇಂದ್ರ ಸಿಂಗರು ಹೇಳಿದ್ದಾರೆ. ನಮ್ಮ ದೇಶದ 320 ಮಿಲಿಯ ಹೆಕ್ಟಾರ್ ಕ್ಷೇತ್ರದ ಪೈಕಿ ಶೇ. 55ರಷ್ಟು ಪ್ರದೇಶವನ್ನು ಕೃಷಿ ಉತ್ಪಾದನೆಗೆ ಉಪಯೋಗಿಸಲಾಗುತ್ತಿದೆ. ಚೈನಾ ದೇಶದಲ್ಲಿ 900 ಮಿಲಿಯ ಹೆಕ್ಟಾರ್ ಪೈಕಿ ಶೇ. 10 ರಷ್ಟು ಮಾತ್ರ ಕೃಷಿಗೆ ಉಪಯೋಗಿಸುತ್ತಿದ್ದಾರೆ. ಆದರೂ ಕೂಡ ಚೀನಾ ದೇಶದೊಡನೆ ಹೋಲಿಸಿದರೆ ನಮ್ಮಲ್ಲಿ ಉತ್ಪಾನೆ ಕಡಿಮೆ. ಚೀನದ ಯಶಸ್ಸಿಗೆ ಕಾರಣವೇನಂದರೆ. ಅಲ್ಲಿ ಶೇ. 70 ರಷ್ಟು ಕೃಷಿ ಭೂಮಿಯನ್ನು ನೀರಾವರಿಗೆ ಒಳಪಡಿಸಿದ್ದಾರೆ; ಭಾರತದಲ್ಲಿ ಶೇ. 23 ರಷ್ಟು ಮಾತ್ರ ನೀರಾವರಿಗೆಒಳಪಡಿಸಲಾಗಿದೆ. ಆದ್ದರಿಂದಲೇ ಚೀನಾ ಯಶಸ್ಸುಗಳಿಸಲು ಸಾಧ್ಯ.

ಅಭಿವೃದ್ಧಿಗೊಂಡ ದೇಶಗಳಲ್ಲಿ 400 ರಿಂದ 700 ಕೆ. ಜಿ. ತನಕ ಒಂದು ಹೆಕ್ಟಾರಿಗೆ ರಸಾಯನಿಕ ಗೊಬ್ಬರ ಉಪಯೋಗಿಸುತ್ತಿರುವಾಗ ನಾವು 32 ಕೆ.ಜಿ. ಮಾತ್ರ ಉಪಯೋಗಿಸುತ್ತಿದ್ದೇವೆ. "ಉಪಯೋಗಿಸಿದ ಪ್ರತಿಯೊಂದು ಟನ್ ರಸಾಯನಿಕ ಗೊಬ್ಬರ 8 ಟನ್ ಹೆಚ್ಚು ಉತ್ಪಾದನೆ ನೀಡುತ್ತದೆ."

ಕೇಂದ್ರ ನೀರಾವರಿ ಮಂತ್ರಿ ಬಿರೇಂದ್ರ ಸಿಂಗರ ಮಾತುಗಳಿವು. ಬಿರೇಂದ್ರ ಸಿಂಗರು ರೈತ ಕುಟುಂಬದಲ್ಲಿ ಹುಟ್ಟಿರುವುದರಿಂದ ಸ್ವಲ್ಪ ಮಟ್ಟಿಗಾದರೂ ಜ್ಞಾನವಿದ್ದಂತೆ ಕಂಡು ಬರುತ್ತದೆ. ಆದರೆ ನಮ್ಮ ಕರ್ನಾಟಕದ ಮಂತ್ರಿಮಂಡಲದ ಕಸುಬುದಾರರಿಗೆ ಬೀರೇಂದ್ರ ಸಿಂಗರ ಮಾತಿನ ಅರ್ಥವಾದಂತೆ ಕಂಡು ಬರುವುದಿಲ್ಲ.

ರೂ. 5 ಲಕ್ಷ ಖರ್ಚಿನ ಸಮಾರಂಭದಲ್ಲಿ ಮುಖ್ಯ ಮಂತ್ರಿ ಗುಂಡೂರಾಯರು ನಾರಾಯಣಪುರ ಅಣೆಕಟ್ಟಿನಿಂದ ಕೃಷ್ಣಾ ನೀರನ್ನು ಬಿಡುಗಡೆ ಮಾಡಿದರು. 44 ಕೋಟಿ ರೂ. ಖರ್ಚಿನ ಈ ಅಣೆಕಟ್ಟಿನ ಒಂದು ಹನಿ ನೀರು ಕೂಡ ರೈತರಿಗೆ ಲಭ್ಯವಾಗಿಲ್ಲ. ಚೀನಾ ದೇಶದಲ್ಲಿ ಕಮ್ಯುನಿಸ್ಟ್ ಸರಕಾರವಿದೆ ನಮ್ಮಲ್ಲಿರುವುದು ಬಂಡವಾಳಶಾಹಿ-ಭೂಮಾಲಿಕ ವರ್ಗದ ಸರಕಾರ. ನೀರಾವರಿ ಯೋಜನೆಗಳಿಗಾಗಿ ಅಪಾರ ಹಣ ಖರ್ಚಾಗುತ್ತಿದೆ. ಆದರೆ ಆಹಾರ ಉತ್ಪಾದನೆಯಲ್ಲಿ ಅದರ ಉಪಯೋಗವಾಗುತ್ತಿಲ್ಲ. ರಸಾಯನಿಕ ಗೊಬ್ಬರಗಳು ಲಭ್ಯವಾಗುತ್ತಿಲ್ಲ; ಹೆಚ್ಚು ಬೆಲೆ ಬಾಳುವ ರಸಾಯನಿಕ ಗೊಬ್ಬರ ಉಪಯೋಗಿಸಿದರೂ ಕೂಡ, ಬೆಳೆ ಬೆಳೆದಾಗ ನ್ಯಾಯ ಬೆಲೆ ಸಿಗುತ್ತಿಲ್ಲ. ಸರಕಾರದ–ದಲ್ಲಾಲಿಗಳ ಬಿಗಿಹಿಡಿತಕ್ಕೆ ತುತ್ತಾಗಿ ಹಾನಿ ಅನುಭವಿಸಬೇಕಾಗುತ್ತದೆ. ಚೀನಾ ದೇಶದಲ್ಲಿ ಕಮ್ಯುನಿಸ್ಟ್ ಪದ್ಧತಿ ಇರುವುದರಿಂದ ಅಲ್ಲಿಯ ಸರಕಾರ ರೈತನ ಬೆಳೆಗೆ ರಕ್ಷಣೆ ನೀಡುತ್ತದೆ. ಸಾಮ್ರಾಜ್ಯಶಾಹಿ ದೇಶ ಅಮೇರಿಕ ಕೂಡ ರೈತನ ರಕ್ಷಣೆಗೆ ಮುಂದಾಗುತ್ತದೆ. ಇತ್ತೀಚೆಗೆ ಪೋಲೆಂಡಿನ ಘಟನೆಯ ನೆವ ಮುಂದೆ ಮಾಡಿ ರಶ್ಯಾ ದೇಶಕ್ಕೆ ಗೋಧಿ ಮತ್ತಿನ್ನಿತರ ಆಹಾರ ಧಾನ್ಯ ಮಾರಾಟ ಮಾಡುವುದನ್ನು ರೇಗನ್ ಸರಕಾರ ರದ್ದುಪಡಿಸಿತ್ತು. ಮುಂಬರುವ ಚುನಾವಣೆ, ರೈತರ ಒತ್ತಡಕ್ಕೆ ಮಣಿದು, ಹೆಚ್ಚು ಬೆಳೆದ ಗೋಧಿ ರಶ್ಯಾ ದೇಶಕ್ಕೆ ಮಾರಾಟ ಮಾಡದಿದ್ದರೆ ಅಮೇರಿಕದಲ್ಲಿ ಧಾರಣೆ ಇಳಿದು ರೈತರಿಗೆ ಹಾನಿಯಾಗುತ್ತದೆಂದು ತಿಳಿದು, ರಾಜಕೀಯವಾಗಿ ವಿರೋಧವಿದ್ದರೂ, ತನ್ನ ನಿಲುವೆಯನ್ನು ಬದಲಿಸಿ ರಶ್ಯಾ ದೇಶಕ್ಕೆ ಗೋಧಿ ಕಳುಹಿಸಲು ಒಪ್ಪಿ ರೈತರ ಬೆಳೆಗೆ ಬೆಲೆಯ ರಕ್ಷಣೆ ನೀಡಬೇಕಾಯಿತು. ಆದರೆ ಮಿಶ್ರ ಆರ್ಥಿಕ ಧೋರಣೆಯನ್ನು ಅನುಸರಿಸುತ್ತಿರುವ ಇಂದಿರಾ ಸರಕಾರಕ್ಕೆ ನಿರ್ದಿಷ್ಟ ಧೋರಣೆ ಇಲ್ಲದಿರುವುದರಿಂದ - ವ್ಯಾಪಾರಸ್ಥರ, ಹಿರಿ ಭೂಮಾಲಿಕರ ಹಿತರಕ್ಷಣೆಯ ಗುರಿಯನ್ನಷ್ಟೆ ಹೊಂದಿರುವುದರಿಂದ—ಬೆಲೆ ರಕ್ಷಣೆ ನೀಡದೆ ಬಹು ಸಂಖ್ಯೆ ರೈತರನ್ನು ಬಡತನದ ದವಡೆಗೆ ದೂಡುತ್ತಿರುವುದನ್ನು ನೋಡುತ್ತಿದ್ದೇವೆ. ತತ್ವ ತಿಳಿದರೂ ಕೂಡ ವರ್ಗ ಹಿತವೇ ಪ್ರಾಧಾನ್ಯವಾಗಿರುವುದರಿಂದ ಕಾಂಗ್ರೆ ಸರಕಾರ ನೀರಾವರಿಯ ಸದುಪಯೋಗಕ್ಕಾಗಲೀ, ಬೆಲೆಯ ರಕ್ಷಣೆಗಾಗಲೀ ಮುಂದಾಗುತ್ತಿಲ್ಲ, ಅಷ್ಟೇ ಅಲ್ಲ ಸರಕಾರ ಒದಗಿಸುವ ಬೀಜ ಸರಿಯಾಗಿಲ್ಲದೆ ಮೊಳಕೆ ಒಡೆಯದೆ ಗುಲ್ಬರ್ಗ ಜಿಲ್ಲೆಯ ರೈತರಿಗೆ ಅಪಾರ ಹಾನಿಯಾಗಿರುವ ಸುದ್ದಿಯನ್ನೂ ಕೇಳುತ್ತಿದ್ದೇವೆ. ಇದು ನಮ್ಮ ದೇಶದ ಗತಿ.

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ—

ಬಸವಣ್ಣನವರ ತತ್ವಕ್ಕನುಸಾರವಾಗಿಯೇ ತಾವು ರಾಜ್ಯದ ಆಡಳಿತ ನಡೆಸಿಕೊಂಡು ಹೋಗುತ್ತಿರುವುದಾಗಿ ಮುಖ್ಯ ಮಂತ್ರಿ ಗುಂಡೂರಾಯರು ಬಿಜಾಪುರ ಜಿಲ್ಲೆಯ ಬಸವನಬಾಗೇವಾಡಿಯಲ್ಲಿ ಸಾರುತ್ತಿದ್ದಂತೆಯೇ, ಕರ್ನಾಟಕ ರಾಜ್ಯಕ್ಕೆ ಮೂಗುತಿಯಂತಿರುವ ನವಮಂಗಳೂರು ಬಂದರಿನ ಭ್ರಷ್ಟಾಚಾರದ ದಾರುಣಕತೆ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. "ಕಲಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ"ವೆಂದು ಬಸವಣ್ಣನವರು ಹೇಳಿದ್ದರು. ಕದಿಯಬೇಡವೆಂದರೆ, ಕಾಂಟ್ರಾಕ್ಟರರಿಂದ ಹಣ ಎತ್ತಿ ಹಾಕುವುದಲ್ಲವೆಂದು ಕಾಂಗ್ರೆ ಮಂತ್ರಿಗಳು ತಿಳಿದುಕೊಂಡಂತಿದೆ, ರೈತರನ್ನು ಗುಂಡು ಹಾರಿಸಿಕೊಂದಿರುವುದು ಕೊಲಬೇಡವೆಂಬ ಅರ್ಥದಲ್ಲವೆಂದು ತಿಳಿದಿದ್ದಾರೆ. ಬರೇ ಆಶ್ವಾಸನೆಗಳ ಸುರಿಮಳೆ ಯಾವ ಅರ್ಥದಲ್ಲಿ ಬರುತ್ತದೆ ಶಬ್ದಕೋಶ ಹುಡುಕಬೇಕು.

(7ನೇ ಪುಟ ನೋಡಿ)

ಅಕ್ಟೋಬರ್ ಕ್ರಾಂತಿ

(3ನೇ ಪುಟದಿಂದ)

ನಾಯಕತ್ವದೊಂದಿಗೆ ತಾನು ಒಪ್ಪಂದಕ್ಕೆ ಬರದೇ ಹೋದಲ್ಲಿ ಸ್ವಾತಂತ್ರ್ಯ ಚಳುವಳಿ ತನ್ನ ಕೈಮೀರಿ ಹೋಗುತ್ತದೆಂಬ ಅರಿವನ್ನುಂಟುಮಾಡುವಲ್ಲಿ ಮಹತ್ವದ ಪಾತ್ರ ವಹಿಸಿತು. ಸ್ವಾತಂತ್ರ್ಯ ಚಳುವಳಿಯು ಬೂರ್ಷ್ವಾ ನಾಯಕತ್ವ ಕೂಡ ವಸಾಹತುಶಾಹೀಗಳೊಂದಿಗೆ ಒಪ್ಪಂದಕ್ಕೆ ಬರುವುದು ವಿವೇಕಯುತವೆಂದು ಪರಿಗಣಿಸಿತು. ಇಬ್ಬರ ನಡುವೆ ಆದ ಒಪ್ಪಂದವು ವಿದೇಶೀ ಆಡಳಿತಗಾರರಿಂದ ಅಧಿಕಾರವನ್ನು ಹೊಸದಾಗಿ ಸೃಷ್ಟಿಸಲ್ಪಟ್ಟದ್ದ ರಾಜ್ಯಗಳಾದ ಭಾರತ ಒಕ್ಕೂಟ ಮತ್ತು ಪಾಕೀಸ್ತಾನಗಳಿಗೆ ವರ್ಗಾಯಿಸಿತು.

ಅಲ್ಲಿಂದೀಚೆಗೆ ಮೊದಲಿನ ವಸಾಹತುಶಾಹಿ ಮತ್ತು ಅಮೇರಿಕದ ವಸಾಹತುಶಾಹಿಗಳು ಈ ಎರಡೂ ದೇಶಗಳ ನಡುವೆ ದ್ವೇಷವನ್ನು ಪ್ರಚೋದಿಸಲು ಎಲ್ಲಾ ಪ್ರಯತ್ನಗಳನ್ನೂ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಅಮೇರಿಕನ್ ಸಾಮ್ರಾಜ್ಯಶಾಹಿಗಳು ಪಾಕೀಸ್ತಾನಕ್ಕೆ ಯಥೇಚ್ಛವಾದ ಶಸ್ತ್ರಾಸ್ತ್ರ ಪೂರೈಕೆಯಲ್ಲಿ ತೊಡಗಿ ಭಾರತ ಒಕ್ಕೂಟವನ್ನು, ಅಫ್ಘಾನಿಸ್ತಾನ್ ಮತ್ತಿತರ ನೆರೆ ರಾಷ್ಟ್ರಗಳನ್ನು ಗಂಡಾಂತರಕ್ಕೆ ನೂಕಿದ್ದಾರೆ. ಸಾಮ್ರಾಜ್ಯಶಾಹಿಗಳು ನಮ್ಮ ಗಡಿ ಪ್ರದೇಶಗಳಲ್ಲಿ ಅದೇ ರೀತಿಯಲ್ಲಿ ಜಮ್ಮು ಕಾಶ್ಮೀರ, ಪಂಜಾಬ್, ಅಸ್ಸಾಂ ಮತ್ತು ಇನ್ನಿತರ ಈಶಾನ್ಯ ಪ್ರದೇಶಗಳಲ್ಲಿ ಚಟುವಟಿಕೆ ನಡೆಸುತ್ತಿದ್ದಾರೆ.

ದೇಶದ ಇನ್ನಿತರ ಭಾಗಗಳಲ್ಲಿ ಕೂಡ ಜಾತಿ ಗಲಭೆಗಳನ್ನು, ಭಾಷೆಗೆ ಸಂಬಂಧಿಸಿದ, ಪ್ರಾದೇಶಿಕವಾದ ಮತ್ತಿತರ ಸಾಮಾಜಿಕ ಗುಂಪುಗಳ ನಡುವೆ ಒಂದರ ವಿರುದ್ಧ ಒಂದನ್ನು ಎತ್ತಿಕಟ್ಟುತ್ತಿವೆ. ಈ ರೀತಿಯಾಗಿ ಅಭದ್ರತೆಯನ್ನುಂಟುಮಾಡುವ ಶಕ್ತಿಗಳನ್ನು ದೇಶದ ಎಲ್ಲಾ ಭಾಗಗಳಲ್ಲೂ ಕಾರ್ಯರೂಪಕ್ಕಿಳಿಸುತ್ತಿವೆ.

ಸಿ ಪಿ ಐ.(ಎಂ) ಮತ್ತು ಇತರ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು, ಸಾಮ್ರಾಜ್ಯಶಾಹಿಗಳ ಪೋಷಣೆಯಲ್ಲಿರುವ ಛಿದ್ರಕಾರಿ ಶಕ್ತಿಗಳ ವಿರುದ್ಧದ ಹೋರಾಟದಲ್ಲಿ ತೊಡಗಿವೆ. ಎಡ ಮತ್ತು ಪ್ರಜಾಪ್ರಭುತ್ವ ಐಕ್ಯತೆಯು ಕಾರ್ಯಕ್ರಮದೊಂದಿಗೆ ಕಳೆದ 35 ವರ್ಷಗಳಿಂದ ನಮ್ಮ ಆಳುವ ವರ್ಗ ಅನುಸರಿಸುತ್ತಿರುವ ದಿವಾಳಿಕೋರ ನೀತಿ ಮತ್ತು ತಪ್ಪಾದ ಬೆಳವಣಿಗೆಯ ಹಾದಿಯ ವಿರುದ್ಧ ಹೋರಾಡುತ್ತಿವೆ.

ಸ್ವಾತಂತ್ರ್ಯ ಚಳುವಳಿಯ ಬೂರ್ಜ್ವಾ ನಾಯಕತ್ವಕ್ಕೆ ಪರ್ಯಾಯವಾಗುವಲ್ಲಿ ವಿಫಲಗೊಂಡರೂ ಕೂಡ ಜನತೆಯ ಪ್ರಜಾ ಸತ್ತಾತ್ಮಕ ಚಳುವಳಿಯನ್ನು ಬೆಳೆಸುವಲ್ಲಿ ಸಂಘಟಿತ ಹೋರಾಟವನ್ನು ನಡೆಸುತ್ತಿರುವ ಕೀರ್ತಿ ಕಮ್ಯುನಿಸ್ಟ್ ಪಕ್ಷ,ಸೋಷಲಿಸ್ಟ್ ಹಾಗೂ ಇತರ ಎಡ ಪಕ್ಷಗಳಿಗೆ ಸಲ್ಲುತ್ತದೆ. ಭಾರತ ಸ್ವಾತಂತ್ರ್ಯ ಗಳಿಸಿದ ನಂತರ ಹೊಸ ಸಂವಿಧಾನದ ಆಧಾರದ ಮೇಲೆ ನಡೆದ ಪ್ರಥಮ ಸಾರ್ವತ್ರಿಕ ಚುನಾವಣೆಯಲ್ಲಿ ಕಮ್ಯುನಿಸ್ಟ್ ಪಕ್ಷ. ಸೋಷಲಿಸ್ಟ್ ಪಕ್ಷ ಮತ್ತು ಇತರ ಎಡ ಶಕ್ತಿಗಳು ಆಳುವ ಪಕ್ಷಕ್ಕೆ ಪರ್ಯಾಯವಾದದ್ದು ತೃಪ್ತಿಕರ ಸಂಗತಿಯಾಗಿದೆ.

ಬಂಡವಾಳಶಾಹೀ ವಿರೋಧ ಪಕ್ಷಗಳು ಪ್ರಾರಂಭದಲ್ಲಿ ಎಡ ಪಕ್ಷಗಳಿಗಿಂತ ಬಲಿಷ್ಠವಾಗಿದ್ದರೂ ಕೂಡ, ಹೋರಾಟಗಳು ಎಡ ಪಕ್ಷಗಳನ್ನು ಆಳುವ ಕಾಂಗ್ರೆಸ್ ಪಕ್ಷ ಅಥವ ಬಲಪಂಥೀಯ ವಿರೋಧ ಪಕ್ಷಗಳಿಗಿಂತಲೂ ಬಲಿಷ್ಠವಾಗಿ ಬೆಳೆಯುವಂತೆ ಮಾಡಲು ನೆರವಾದುವು.

ಎಡ ಪಕ್ಷಗಳು ತಮ್ಮ ಪ್ರಭಾವವನ್ನು ಬಲಪಂಥೀಯ ವಿರೋಧ ಪಕ್ಷಗಳ ನಡುವೆಯೂ ಅದೇ ರೀತಿಯಲ್ಲಿ ಆಳುವ ಕಾಂಗ್ರೆಸ್ ಪಕ್ಷದ ನಡುವೆಯೂ ಬೆಳೆದವು. ಇದರಿಂದಾಗಿ ಈ ಪಕ್ಷಗಳ ಹೆಚ್ಚಿನ ವಿಭಾಗಗಳು ಎಡ ಪಕ್ಷಗಳ ಕಡೆಗೆ ಆಕರ್ಷಿತಗೊಂಡವು. ಬಹಳಷ್ಟು ಜನ ಆಳುವ ಪಕ್ಷದ ಕುರಿತಾದ ನಂಬಿಕೆಯನ್ನೂ ಕಳೆದುಕೊಂಡು, ಒಳಜಗಳದಿಂದ ಉಂಟಾಗುತ್ತಿರುವ ಅನೈಕ್ಯತೆಯನ್ನು ಮತ್ತು ಬೂರ್ಜ್ವಾ ವಿರೋಧ ಪಕ್ಷಗಳು ನಿಜವಾದ ಪರ್ಯಾಯವನ್ನು ಒದಗಿಸಲಾಗದ ಸ್ಥಿತಿಯಲ್ಲಿರುವುದನ್ನು ಅರಿಯ ತೊಡಗಿದರು. ಒಂದು ಸರಿಯಾದ ಕಾರ್ಯಕ್ರಮದ ಆಧಾರದ ಮೇಲೆ ಐಕ್ಯತೆಯಿಂದ ಬೆಳೆಯತೊಡಗಿದ್ದ ಎಡ ಪಕ್ಷಗಳತ್ತ ಜನತೆಯ ಒಲವು ಬೆಳೆಯ ತೊಡಗಿತು. ಆಳುವ ಪಕ್ಷ ಮತ್ತು ಬೂರ್ಜ್ವಾ ವಿರೋಧ ಪಕ್ಷಗಳಿಗೆ ಪರ್ಯಾಯವಾದ ಧೋರಣೆ ಇದಕ್ಕಿದೆ.

ಎಡ ಪಕ್ಷಗಳು ಇವುಗಳನ್ನೆಲ್ಲಾ ವ್ಯಾಪಕವಾಗಿ ಕಾರ್ಯರೂಪಕ್ಕೆ ತರಲು ಸಮರ್ಥವಾಗಿವೆ. ಏಕೆಂದರೆ ಕ್ರಾಂತಿಯನ್ನು ಯಶಸ್ವಿಗೊಳಿಸಿದ ರಷ್ಯನ್ ಬೊಲ್ಷೆವಿಕರು ಅನುಸರಿಸಿದ ಮಾರ್ಕ್ಸ್ವಾದವೇ ಇಲ್ಲಿನ ಎಡ ಪಕ್ಷಗಳಿಗೂ ಆಧಾರವಾಗಿದೆ. ಇಲ್ಲಿನ ಎಡ ಪಕ್ಷಗಳು ರಷ್ಯದ ಪ್ರಥಮ ಸಮಾಜವಾದೀ ಕ್ರಾಂತಿಯಿಂದಷ್ಟೇ ಅಲ್ಲದೆ ಪೂರ್ವ ಯೂರೋಪ್, ಚೀನಾ, ಕೊರಿಯಾ, ಇಂಡೋ ಚೀನಾ, ಕ್ಯೂಬಾ ಮುಂತಾದ ದೇಶಗಳಲ್ಲಿ ನಡೆದ ಸಮಾಜವಾದೀ ಕ್ರಾಂತಿಗಳಿಂದಲೂ ಅನುಭವವನ್ನು ಪಡೆದಿವೆ. ಎಲ್ಲಕ್ಕಿಂತ ಹೆಚ್ಚಾಗಿ ಈ ದೇಶದ ಎಡ ಪಂಥೀಯರು ಜಗತ್ತಿನ ಇತರ ಬಂಡವಾಳಶಾಹೀ ದೇಶಗಳಲ್ಲಿ ಕ್ರಾಂತಿಗಾಗಿ ಹೋರಾಡುತ್ತಿರುವ ತಮ್ಮ ಒಡನಾಡಿಗಳೊಂದಿಗೆ ನಿಕಟ ಭಾಂದವ್ಯವನ್ನು ಹೊಂದಿದ್ದಾರೆ. ಮಾನವ ಜನಾಂಗಕ್ಕೆ ಉಜ್ವಲ ಭವಿಷ್ಯವಿದೆ ಎಂಬ ವಿಶ್ವಾಸ ಎಡ ಪಂಥೀಯರಿಗಿದೆ.

(ಕಾಂ| ಇ. ಎಂ. ಎಸ್. ಅವರ ಈ ಲೇಖನ ಸಿ.ಐ.ಟಿ.ಯು. ಪ. ಬಂಗಾಲ ಘಟಕದ ಮುಖಪತ್ರ ['ಶ್ರಮಿಕ್ ಅಂದೋಲನ್'],ಕ್ಕೆ ಬರೆದಿದ್ದು)

ಕರ್ನಾಟಕ ರಾಜ್ಯದಲ್ಲಿ

(6ನೇ ಪುಟದಿಂದ)

ರೇಣುಕಾ ರಾಜೇಂದ್ರನ್ ಪ್ರಕರಣ, ಸಿಮೆಂಟ್ ಹಗರಣ, ಸರ್ಕಸ್ ದುರಂತ, ಜನತಾ ಮನೆಗಳ ನಿರ್ಮಾಣ-ಮೊದಲಾದವುಗಳಿಗೆಲ್ಲ ಕಿರೀಟ ಪ್ರಾಯವಾಗಿ ನವಮಂಗಳೂರು ಬಂದರದ ದುರಂತ ನಡೆದಿದೆ.

ಕೆಲವು ವರ್ಷಗಳ ಹಿಂದೆ ಪಾನಶೆಟ್ ಡ್ಯಾಮ್ ಒಡೆದು ಅರ್ಧ ಪುಣೆ ನಗರವೇ ನೀರಲ್ಲಿ ಕೊಚ್ಚಿಕೊಂಡು ಹೋಗಿ ಜೀವ-ಆಸ್ತಿಗೆ ಹೇಳತೀರದಷ್ಟು ಹಾನಿಯಾಗಿರುವುದನ್ನು ಇಂದಿಗೂ ಯಾರೂ ಮರೆತಿಲ್ಲ. ಆಲಮಟ್ಟಿ ಮತ್ತಿನ್ನಿತರ ಮಹಾ ಯೋಜನೆಗಳಿಗಾಗಿ ಉಪಯೋಗಿಸಬೇಕಾದ ಸಾವಿರಾರು ಚೀಲ ಸಿಮೆಂಟ್ ಬೇರೆಡೆ ಬ್ಲ್ಯಾಕ್ ಮಾರ್ಕೆಟ್ಟಿನಲ್ಲಿ ಮಾರಾಟವಾಗುತ್ತಿರುವ ಸುದ್ದಿ ಕೇಳಿ ಕಿವಿ ಕಿವುಡಾಗಿದೆ. ಮಂತ್ರಿಗಳೂ, ಅಧಿಕಾರಿಗಳೂ, ಕಾಂಟ್ರ್ಯಾಕ್ಟರರೂ ಸಿಮೆಂಟ್ ನುಂಗಿದ ನಂತರ ನಿರ್ಮಾಣವಾಗುತ್ತಿರುವ ಅಣೆಕಟ್ಟುಗಳು ಪಾನಶೆಟ್ ಡ್ಯಾಮಿನ ಗತಿ ಕಾಣುವುದಿಲ್ಲವೆಂಬ ವಿಶ್ವಾಸಕೊಡಲು ಯಾರೂ ತಯಾರಿಲ್ಲ. ಹಣ ಪಡೆಯುವ ಆಸೆಯಿಂದಾಗಿ, ಅನುಭವವಿಲ್ಲದ ಕಾಂಟ್ರ್ಯಾಕ್ಟರರಿಗೆ ಕಂಟ್ರಾಕ್ಟು ಕೊಟ್ಟಿದ್ದರಿಂದ ನವಮಂಗಳೂರು ಬಂದರಿನ ಮೊದಲ ಶೆಡ್ಡಿನ 120 ಮೀಟರ್ ಉದ್ದದ ತೊಲೆಯೊಂದು ಕುಸಿದುಬಿದ್ದಿರುವ ಸುದ್ದಿ ಕೇಳಿದಾಗ, ಗುಂಡೂರಾಯರ ತನ್ನ ಆಡಳಿತೆಯ ವೈಖರಿಯ ಹೇಳಿಕೆ ಎಷ್ಟು ಹುಸಿಯಾಗಿದೆಯೆಂದು ತಿಳಿದು ಬರುತ್ತದೆ.

ಬಸವಣ್ಣನ ವಚನಗಳನ್ನು ಇವರು ಪಠಿಸುತ್ತಿರುವಾಗಲೇ ದಾಂಡೇಲಿಯ ನಗರ ಸಭೆಯ ಪ್ರಶಂಸಾರ್ಹ ಕಾರ್ಯ ಕಣ್ಣು ಮುಂದೆ ಎದ್ದು ಕಾಣುತ್ತದೆ. ನಗರ ಸಭೆಯ ಅಧಿಕಾರಿಗಳೇ ಭ್ರಷ್ಟರಾಗಿ ಮಾಡಿದ ಅಸಮರ್ಪಕ ಕೆಲಸದ ಚೌಕಾಶಿಯಾಗಿ, ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕೆಂದು ಕೇಳಿಕೊಂಡವರು ಸಿ. ಪಿ. ಐ. (ಎಂ) ನ ಹಿಡಿತದಲ್ಲಿದ್ದ ದಾಂಡೇಲಿ ನಗರ ಸಭೆಯ ಸದಸ್ಯರು. ಜನರಿಗೆ ಮೋಸಮಾಡಿ ಅಸಮರ್ಪಕ ಕೆಲಸ ಮಾಡಿದ್ದನ್ನು ವಿಚಾರಿಸುವಂತೆ ಮಾಡಿ, ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವಂತೆ ಮಾಡಿದ ಉದಾಹರಣೆ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಚರಿತ್ರೆಯಲ್ಲೇ ಇದು ಮೊದಲಿನದಾಗಿದೆ. ಗುಂಡೂರಾಯರು ಇದರಿಂದ ಪಾಠ ಕಲಿತು, ಬಸವಣ್ಣನ ವಚನಗಳನ್ನು ಪಠಿಸುವುದು ಒಳಿತು.

○

ನನ್ನ ಭೂಗತ ಜೀವನದ ದಿನಗಳು

(5ನೇ ಪುಟದಿಂದ)

ಒಂದು ಝರಿಯು ಹರಿಯುತ್ತಿತ್ತು. ನಾವು ಅಲ್ಲಿಗೆ ಹೋಗಿ ನಮ್ಮ ಪ್ರಾತಃ ಕರ್ಮಗಳನ್ನು ಮುಗಿಸಿದೆವು. ಸ್ವಲ್ಪ ನೀರನ್ನು ಕುಡಿದು ಪುನಃ ಬಂಡೆ ಕಲ್ಲಿನ ಮೇಲೆ ಬಂದು ಕುಳಿತು ಗ್ರಾಮದಲ್ಲಿ ಪೋಲೀಸರ ದೌರ್ಜನ್ಯವನ್ನು ತಡೆಗಟ್ಟುವ ಕುರಿತು ಚರ್ಚಿಸತೊಡಗಿದೆವು.

ಮಧ್ಯಾಹ್ನದ ವೇಳೆಗೆ ಒಬ್ಬ ಹುಡುಗನು ದೊಡ್ಡ ಮಡಿಕೆಯೊಂದನ್ನು ಹೊತ್ತುಕೊಂಡು ಬಂದನು. ಅದನ್ನು ನಮ್ಮ ಮುಂದಿಟ್ಟು ನನಗೆ ಒಂದು ಪತ್ರವನ್ನು ಕೊಟ್ಟನು. "ನೀವು ಕಾಡಿನೊಳಗೆ ನುಸುಳಿರುವ ಸುಳಿವು ಪೋಲೀಸರಿಗೆ ಸಿಕ್ಕಿದೆ. ನಮ್ಮ ಹುಡುಗರ ಕೂಗಿನ ಧ್ವನಿಯನ್ನು ಗಮನಿಸಿ ಪೋಲೀಸರು ಬರುತ್ತಿರುವ ದಿಕ್ಕನ್ನು ಗುರುತಿಕೊಂಡು ಮುಂದುವರಿಯಿರಿ" ಎಂದು ಆ ಪತ್ರದಲ್ಲಿ ತಿಳಿಸಲಾಗಿತ್ತು. ನಾವೆಲ್ಲಾ ಬಹಳ ಹಸಿದಿದ್ದೆವು. ಅಗಲವಾದ ಎಲೆಗಳನ್ನು ಕಿತ್ತು ತಂದು ಹುಡುಗನು ತಂದಿದ್ದ ಅನ್ನವನ್ನು ತಿಂದೆವು. ನಾವು ಊಟವನ್ನು ಮುಗಿಸಿ ಒಂದೊಂದು ಬೀಡಿ ಸೇದುತ್ತಾ ಕುಳಿತಿದ್ದೆವು. ದನಗಾಹಿ ಹುಡುಗರ ಕೂಗು ಕೇಳಿಸಿತು. ಅವರು ದನಗಳನ್ನು ಮೇಯಿಸುತ್ತಿದ್ದರು. ಅವರ ಕೂಗಿನಿಂದ ನಮಗೆ ಸಂಜ್ಞೆ ದೊರೆಯಿತು. ಕೂಗಿನ ಧ್ವನಿ ಬಂದ ಕಡೆಯಿಂದಲೇ ಪೋಲೀಸರು ಕಾಡಿನೊಳಗೆ ಬರುತ್ತಿದ್ದರು. ನಾವು ಬಂಡೆ ಕಲ್ಲಿನಿಂದ ಕೆಳಗಿಳಿದು ಕಾಡಿನ ಮಧ್ಯ ಭಾಗದೆಡೆ ಹೊರಟೆವು. ಮುಳ್ಳುಗಳು ನಮ್ಮ ಬಟ್ಟೆ, ಮೈಗಳಿಗೆ ಚುಚ್ಚಿಕೊಂಡವು. ಗಾಯಗಳಿಂದ ರಕ್ತ ಸುರಿಯಲಾರಂಭಿಸಿತು. ನಮ್ಮಲ್ಲಿ ಒಬ್ಬ ಸಂಗಾತಿ ಕಲ್ಲೊಂದರ ಮೇಲೆ ಕುಸಿದು ಬಿದ್ದರು. ನಾನು ಆ ಸಂಗಾತಿಯ ನೆರವಿಗೆ ಹೋದೆನು. ಮುಂದೆ ನಡೆಯುವುದು ದುಸ್ತರವಾಗಿತ್ತು. ಆದರೆ ಪೋಲೀಸರಿಂದ ತಪ್ಪಿಸಿಕೊಳ್ಳಬೇಕಾದರೆ ಮುಂದುವರಿಯದೆ ಬೇರೆ ದಾರಿಯಿರಲಿಲ್ಲ.

ಸಂಜೆ 4 ಗಂಟೆಯ ವೇಳೆಗೆ ನಾವು ವೃಕ್ಷಗಳು ಹುಲುಸಾಗಿ, ದಟ್ಟವಾಗಿ ಬೆಳೆದಿದ್ದ ಪ್ರದೇಶವನ್ನು ತಲುಪಿದೆವು. ಆ ರಾತ್ರಿಯನ್ನು ಅಲ್ಲಿಯೇ ಕಳೆಯಲು ನಿರ್ಧರಿಸಿದೆವು. ಜಾಗವನ್ನು ಸ್ವಚ್ಛಗೊಳಿಸಿ ಬಟ್ಟೆಗಳನ್ನು ಹರಡಿದೆವು. ನಾನು ಕಾಲುಗಳನ್ನು ಚಾಚಿಕೊಂಡು ಮಲಗಿದೆ. ಕೆಲವು ಸಂಗಾತಿಗಳು ಮರಗಳ ದಿಮ್ಮಿಗಳ ಮೇಲೆ ಮಲಗಿದರು.

ಮತ್ತೊಂದು ರಾತ್ರಿ ಕಳೆಯಿತು. ಸಂಗಾತಿಗಳ ಮುಖದ ಮೇಲೆ ದಣಿವು, ಸಂಕಟ, ನೋವುಗಳ ಛಾಯೆ ಕಂಡಿತು. ನಾನೂ ಚಿಂತಾಕ್ರಾಂತನಾಗಿದ್ದೆ. ಆದರೂ ನನ್ನ ಸಂಗಾತಿಗಳ ನೈತಿಕ ಧೈರ್ಯವನ್ನು ಬಲಗೊಳಿಸಲು ಪ್ರಯತ್ನಿಸಿ ಹೇಳಿದೆ. "ಸಂಗಾತಿಗಳೇ, ಸ್ವಾತಂತ್ರ್ಯದ ಹಾದಿ ಗುಲಾಬಿ ಹೂಗಳನ್ನು ಚೆಲ್ಲಿದ ದಾರಿಯಲ್ಲ. ಇದು ಒಂದು ಕಷ್ಟಕರವಾದ, ದುರ್ಗಮವಾದ ಹಾದಿ."

(ಮುಂದುವರಿಯುವುದು)

ಜಿಲ್ಲಾಧಿಕಾರಿ ಕಚೇರಿ ಮುಂದೆ ಮೂರ್ತೆದಾರರ ಸತ್ಯಾಗ್ರಹ

ದ ಕ. ಜಿಲ್ಲೆಯಲ್ಲಿ ಶೇಂದಿಗೆ ಮೂರ್ತೆ ಮಾಡುವ ಸಾವಿರಗಟ್ಲೆ ಮೂರ್ತೆದಾರರು ಗುತ್ತಿಗೆ ಕಂಟ್ರಾಕ್ಟುದಾರರಿಂದ ಪಡುವ ಕಷ್ಟದ ಬಗ್ಗೆ ತಾ|| 12-10-1982 ರಂದು ಕೇಳಿಕೆಗಳ ಮನವಿಯೊಂದನ್ನು ಮೂರ್ತೆದಾರರು ಜಿಲ್ಲಾಧಿಕಾರಿಯವರಿಗೆ ಅರ್ಪಿಸಿದ್ದರು. ಆದರೆ ಕಂಟ್ರಾಕ್ಟುದಾರರು ಈ ಬಗ್ಗೆ ಯಾವ ಪ್ರತಿಕ್ರಿಯೆ ವ್ಯಕ್ತಪಡಿಸದಿರುವುದರಿಂದ ತಾ|| 29—10—1982 ರಂದು ಜಿಲ್ಲಾಧಿಕಾರಿಯವರ ಕಛೇರಿಯ ಮುಂದೆ ಮೂರ್ತೆದಾರರು ಬೆಳಿಗ್ಗೆ 11 ಗಂಟೆಯಿಂದ ಸತ್ಯಾಗ್ರಹವನ್ನು ಆರಂಭಿಸಿದ್ದಾರೆ.

ಹೊಸಪೇಟೆ :

ಡಿ.ವೈ.ಎಫ್.ಐ. ಸರ್ವಸದಸ್ಯರ ಸಭೆ

ಡಿ. ವೈ. ಎಫ್. ಐ. ಹೊಸಪೇಟೆ ತಾಲ್ಲೂಕು ಸಮಿತಿಯ ಸರ್ವಸದಸ್ಯರ ಸಭೆ 13-10-82 ರಂದು ನಡೆಯಿತು. ಅಧ್ಯಕ್ಷತೆಯನ್ನು ಕಾಂ|ಜಿ.ವಿ.ಶ್ರೀರಾಮ ರೆಡ್ಡಿಯವರು ವಹಿಸಿದ್ದರು.

ಕಾಂ| ಎಸ್. ರಾಮಚಂದ್ರ ನಾವಡ ಅವರು ಸಂಚಾಲಕರಾಗುಳ್ಳ 8 ಜನ ಸದಸ್ಯರ ಸಮಿತಿಯನ್ನು ಚುನಾಯಿಸಲಾಯಿತು. ಸಂಘಟನೆಗೆ ಸದಸ್ಯತ್ವ ನೋಂದಾಯಿಸುವ ಕೆಲಸವನ್ನು ತೀವ್ರಗೊಳಿಸುವ ತೀರ್ಮಾನ ಕೈಗೊಳ್ಳಲಾಯಿತು.

ಕೆ ಜಿ ಎಫ್ ನಲ್ಲಿ ಭಾರೀ ಬಹಿರಂಗ ಸಭೆ

ಕಾಂಗ್ರೈಗೆ ಪಾಠಕಲಿಸಲು ಬಿ. ಟಿ. ಆರ್. ಕರೆ

ತಮ್ಮ ನ್ಯಾಯಯುತ ಬೇಡಿಕೆಗಳಿಗೋಸ್ಕರ ಹೋರಾಟ ನಡೆಸುತ್ತಿರುವ ಕೈತ ಕಾರ್ಮಿಕರ ಮೇಲೆ ಗುಂಡಿನ ಸುರಿಮಳೆಗೈಯುತ್ತಿರುವ ಗುಂಡೂರಾವ್ ಸರಕಾರವನ್ನು ಮುಂಬರುವ ಚುನಾವಣೆಗಳಲ್ಲಿ ಮೂಲೆಗುಂಪು ಮಾಡಲು ಕಾಂ| ರಣದಿವೆ ಕರೆನೀಡಿದರು. ಅವರು ಅಕ್ಟೋಬರ್ 27 ರಂದು ಕೆ.ಜಿ.ಎಫ್.ನಲ್ಲಿ ನಡೆದ ಭಾರೀ ಬಹಿರಂಗ ಸಭೆಯುನ್ನುದ್ದೇಶಿಸಿ ಮಾತನಾಡುತ್ತಿದ್ದರು. ಸಭೆಯ ಅಧ್ಯಕ್ಷತೆಯನ್ನು ಕಾಂ| ಸೂರ್ಯನಾರಾಯಣರಾವ್ ವಹಿಸಿದ್ದರು. ಆರಂಭದಲ್ಲಿ ಕಾಂ| ಸವರಿದಾಸ್ ಸ್ವಾಗತಿಸಿದರು.

ರಾಷ್ಟ್ರೀಯ– ಅಂತರ ರಾಷ್ಟ್ರೀಯ ಪ್ರಸಕ್ತ ಪರಿಸ್ಥಿತಿಯನ್ನು ವಿವರಿಸಿದ ಕಾಂ| ಬಿ ಟಿ. ಆರ್. ಸಾಮ್ರಾಜ್ಯಶಾಹಿಗಳ ಯುದ್ಧ ಪ್ರಯತ್ನಗಳನ್ನು ಪ್ರತಿಭಟಿಸುವಂತೆ ಮನವಿ ಮಾಡಿದರು. ದುಡಿಯುವ ಜನತೆಯ ಮೂಲಭೂತ ಹಕ್ಕುಗಳನ್ನು ದಮನಮಾಡುತ್ತಿರುವ ಕಾಂಗ್ರೈ ಸರಕಾರದ ವಿರುದ್ಧ ಹೋರಾಟ ನಡೆಸಲು ಕರೆ ನೀಡಿದರು.

ಕೆ.ಜಿ.ಎಫ್.ನ ಶಾಸಕ ಆರ್ಮುಗಂನ ಗೂಂಡಾಗಿರಿಯನ್ನು ತೀವ್ರವಾಗಿ ಖಂಡಿಸಿದ ಕಾಂ| ಬಿ. ಟಿ. ಆರ್. ಇನ್ನು ಈ ವರ್ತನೆಯನ್ನು ಸಹಿಸಲಾಗದು ಎಂದು ಎಚ್ಚರಿಸಿದರು.

ಕೊನೆಯಲ್ಲಿ ಕಾಂ| ಟಿ.ಎಸ್. ಮಣಿ ವಂದನಾರ್ಪಣೆ ಮಾಡಿದರು. ಆರ್ಮುಗಂ ಗೂಂಡಾಗಳಿಂದ ಕೊಲೆಗೀಡಾದ ಕಾಂ| ಆರೋಗ್ಯದಾಸ್ ಅವರ ಮನೆಗೆ ಕಾಂ| ರಣದಿವೆ ಮತ್ತು ಕಾಂ| ಸೂರಿಯವರು ಭೇಟಿ ನೀಡಿ ಅವರ ಕುಟುಂಬದವರನ್ನು ಸಂತೈಸಿದರು.

○

ಕೆ. ಜಿ. ಎಫ್. ಘಟನೆ ಖಂಡಿಸಿ :

ಪ್ರತಿಭಟನಾ ಮೆರವಣಿಗೆ

ಚಿಕ್ಕಬಳ್ಳಾಪುರ :

ಕಾಂ| ಆರೋಗ್ಯದಾಸ್ ಅವರ ಕೊಲೆಯನ್ನು ಖಂಡಿಸಿ 18-10-82 ರಂದು ಚಿಕ್ಕಬಳ್ಳಾಪುರದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು. ನೇತೃತ್ವವನ್ನು ಕಾಂ| ಎಸ್. ಲಕ್ಷ್ಮಯ್ಯ ಮತ್ತು ಕಾಂ| ಎಸ್. ಸೂರ್ಯನಾರಾಯಣರಾವ್ ವಹಿಸಿದ್ದರು. ಕೊಲೆಪಾತಕರನ್ನು ಕೂಡಲೇ ಬಂಧಿಸುವಂತೆ ಒತ್ತಾಯಿಸಿ ಮುಖ್ಯಮಂತ್ರಿಗೆ ಎ. ಸಿ. ಯವರ ಮೂಲಕ ಮನವಿ ಸಲ್ಲಿಸಲಾಯಿತು. ಕೊನೆಯಲ್ಲಿ ಬಹಿರಂಗಸಭೆ ನಡೆಯಿತು.

ಕೊಡಗು :

ಕಾಂ| ಆರೋಗ್ಯದಾಸ್ ಅವರ ಕೊಲೆಪಾತಕಿಗಳನ್ನು ಬಂಧಿಸುವಂತೆ ಒತ್ತಾಯಿಸಿ 18-10-82 ರಂದು ಜಿಲ್ಲೆಯ ಅನೇಕ ಸ್ಥಳಗಳಲ್ಲಿ ಪ್ರತಿಭಟನಾ ಸಭೆ, ಪಂಜಿನ ಮೆರವಣಿಗೆ ನಡೆದಿರುವ ವರದಿ ಬಂದಿದೆ.

ಗೋಣಿಕೊಪ್ಪಲು, ಕುಟ್ಟ ವಿಭಾಗ, ತಿತಿಮತಿ, ಕೋನಾನ್ ಕಟ್ಟೆ, ಹುದಿಕೇರಿ ಟೀ ಎಸ್ಟೇಟ್ ಮತ್ತು ಒಂಟಿಯಂಗಡಿ ಮುಂತಾದ ಸ್ಥಳಗಳಲ್ಲಿ ಸಿ. ಪಿ. ಐ. (ಎಂ) ಕಾರ್ಯಕರ್ತರು ಪಂಜಿನ ಮೆರವಣಿಗೆ ನಡೆಸಿ ತಮ್ಮ ಪ್ರತಿಭಟನೆ ವ್ಯಕ್ತಪಡಿಸಿದರು.

●

ಹರಿಹರ :

ಪಾಲಿಫೈಬರ್ ಕಾರ್ಮಿಕರ ಬೆಂಬಲಾರ್ಥ ಬಹಿರಂಗಸಭೆ

ಪಾಲಿಫೈಬರ್ ಕಾರ್ಮಿಕರ ಮುಷ್ಕರವನ್ನು ಬೆಂಬಲಿಸಿ 30–10–82 ರಂದು ಹರಿಹರದಲ್ಲಿ ಬಹಿರಂಗಸಭೆ ನಡೆಯಿತು. ನಗರದ ಗಾಂಧೀ ಮೈದಾನದಲ್ಲಿ ನಡೆದ ಸಭೆಯ ಅಧ್ಯಕ್ಷತೆಯನ್ನು ಶಾಸಕ ಕಾಂ| ಪಂಪಾಪತಿ ವಹಿಸಿದ್ದರು. ಆರಂಭದಲ್ಲಿ ಪಾಲಿಫೈಬರ್ ಕಾರ್ಮಿಕ ಸಂಘದ ಕಾರ್ಯದರ್ಶಿ ಕಾಂ| ಚಂದ್ರಶೇಖರ್ ಮುಷ್ಕರದ ಹಿನ್ನೆಲೆಯನ್ನು ವಿವರಿಸಿದರು.

ಗ್ರಾಸ್‌ಲಿನ್ ಸ್ಟಾಪ್ ಅಸೋಸಿಯೇಷನ್ ಅಧ್ಯಕ್ಷ ಪ್ರೊ. ಕೆ. ಎಸ್. ಶರ್ಮ, ಕೆ. ಜಿ. ಸಿದ್ಧಪ್ಪ, ಮೈಸೂರ್ ಕಿರ್ಲೋಸ್ಕರ್ ಕೆಲಸಗಾರರ ಸಂಘದ ಉಪಾಧ್ಯಕ್ಷ ಕಾಂ| ಎಸ್. ಜಿ. ಪಠಾಣ ಮುಂತಾದವರು ಮಾತನಾಡಿ ಮುಷ್ಕರಕ್ಕೆ ಬೆಂಬಲ ಸೂಚಿಸಿದರು. ನಂತರ ಸಂಘದ ಅಧ್ಯಕ್ಷ ಕಾಂ| ವಿ. ಜಿ. ಕೆ· ನಾಯರ್ ಅವರು ಮಾತನಾಡಿ ಇಲ್ಲಿಯ ವರೆಗಿನ ಬೆಳವಣಿಗೆಗಳನ್ನು ವಿವರಿಸಿದರು.

○

ಕುಷ್ಟಗಿ :

ದೇವದಾಸಿಯರ ಸಂಘ

ಜನರ ಮೂಢ ನಂಬಿಕೆ ಕಂದಾಚಾರಗಳಿಗೊಂದು ಸ್ಪಷ್ಟ ನಿದರ್ಶನ ದೇವದಾಸಿ ಪದ್ಧತಿ. ಇದೊಂದು ನಮ್ಮ ಸಮಾಜದ ದುಷ್ಟ ಪದ್ಧತಿ. ಜನತೆಯಲ್ಲಿ ವೈಚಾರಿಕ ಪ್ರಜ್ಞೆಯನ್ನು ಬೆಳೆಸಿದಾಗ ಮಾತ್ರ ಈ ದುಷ್ಟಪದ್ಧತಿ ನಿರ್ಮೂಲ್ಯ ಸಾಧ್ಯ.

25-10-82 ರಂದು ಕುಷ್ಟಗಿ (ರಾಯಚೂರು ಜಿಲ್ಲೆ) ಯಲ್ಲಿ ದೇವದಾಸಿಯರ ಸಭೆ ನಡೆದು, ತಮ್ಮ ಸಮಸ್ಯೆಗಳ ಕುರಿತು ಚರ್ಚಿಸಿದರು.

ದೇವದಾಸಿಯರ ಜೀವನ ಮಟ್ಟ ಎತ್ತರಿಸಿಕೊಂಡು, ಸ್ವತಂತ್ರ ಜೀವನ ನಡೆಸಲು ನೆರವಾಗಬೇಕು, ಈ ದುಷ್ಟ ಪದ್ಧತಿಯನ್ನು ನಿರ್ಮೂಲ ಮಾಡಬೇಕು; ದೇವದಾಸಿಯರ ಮಕ್ಕಳ ಭವಿಷ್ಯದ ಜೀವನಕ್ಕೆ ಸರಕಾರ ಅನುಕೂಲ ಒದಗಿಸಬೇಕು......... ಇತ್ಯಾದಿ ಬೇಡಿಕೆಗಳಿಗಾಗಿ ಸರಕಾರವನ್ನು ಒತ್ತಾಯಿಸಲಾಯಿತು.

ಸಮಸ್ಯೆಗಳ ಪರಿಹಾರಕ್ಕಾಗಿ ಸಂಘಟನೆ ಅವಶ್ಯ ಎಂದು ಅರಿತ ದೇವದಾಸಿಯರು ಇದೀಗ ಸಂಘವನ್ನು ಸ್ಥಾಪಿಸಿದ್ದಾರೆ. ಶ್ರೀಮತಿ ಯಮುನವ್ವ ಅಧ್ಯಕ್ಷೆಯಾಗಿ ಆಯ್ಕೆಯಾಗಿದ್ದಾರೆ.

ಹಳೆಯ ಮೌಲ್ಯಗಳು ನಶಿಸುತ್ತಿರುವ ಈ ಕಾಲಘಟ್ಟದಲ್ಲಿ ಈ ಬೆಳವಣಿಗೆ ಸಕಾಲಿಕ.

●

ನಿರಾಕರಣೆ

ಎಲ್ಲ ವಿರೋಧಿ ಪಕ್ಷಗಳ ವಿದ್ಯಾರ್ಥಿ ಯುವಜನರ ಸಮ್ಮೇಳನವು ಸಪ್ಟೆಂಬರ್ 5 ಮತ್ತು 6 ರಂದು ಧಾರವಾಡದಲ್ಲಿ ನಡೆಯಲಿರುವುದಾಗಿ ಕೆಲವು ದಿನಪತ್ರಿಕೆಗಳಲ್ಲಿ ವರದಿಯಾಗಿದೆ.

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ. ವೈ. ಎಫ್. ಐ.) ಈ ಸಮ್ಮೇಳನದಲ್ಲಿ ಪಾಲ್ಗೊಳ್ಳಲಿದೆಯೆಂಬ ವರದಿಯನ್ನು ಡಿ. ವೈ. ಎಫ್. ಐ. ಪ್ರಧಾನ ಕಾರ್ಯದರ್ಶಿ ಕಾಂ| ಜಿ. ವಿ. ಶ್ರೀರಾಮರೆಡ್ಡಿಯವರು ನಿರಾಕರಿಸಿದ್ದಾರೆ. ಈ ಕುರಿತು ಒಂದು ಹೇಳಿಕೆಯೊಂದನ್ನು ನೀಡಿದ್ದಾರೆ.

(1ನೇ ಪುಟದಿಂದ)

(4) ರಾಜ್ಯದಲ್ಲಿ ಸಾರ್ವಜನಿಕರಿಗೆ ರಕ್ಷಣೆ ನೀಡಲು ನಿಷ್ಪಕ್ಷಪಾತವಾಗಿ ವರ್ತಿಸಬಲ್ಲ ಪೋಲೀಸ್ ವ್ಯವಸ್ಥೆಯನ್ನು ರೂಪಿಸಬೇಕು;

(5) ರೈತರಿಗೆ ಮತ್ತು ಕೃಷಿ ಕಾರ್ಮಿಕರಿಗೆ ಮುಖ್ಯ ಮಂತ್ರಿಗಳು ನೀಡಿರುವ ಭರವಸೆಗಳನ್ನು ಈಡೇರಿಸಬೇಕು;

(6) ಕ್ಷಾಮ ಪೀಡಿತ ಪ್ರದೇಶಗಳಿಗೆ ಮಂಜೂರಾಗಿರುವ ಪರಿಹಾರ ಹಣ ಸಕ್ರಮವಾಗಿ ವಿತರಣೆಯಾಗುತ್ತಿಲ್ಲ. ಈ ಬಗ್ಗೆ ಕೂಡಲೇ ಕ್ರಮವಹಿಸಬೇಕು ಮತ್ತು ಪರಿಹಾರ ಹಣ ಹೆಚ್ಚಿಸಬೇಕು;

(7) ಕಾರ್ಮಿಕ ಮಂತ್ರಿ ಜಕನೂರ್ ಅವರ ಅಧ್ಯಕ್ಷತೆಯಿಂದ, 26 ಕೈಗಾರಿಕೆಗಳಲ್ಲಿ ನಿಗದಿಯಾದ ಕನಿಷ್ಟ ಕೂಲಿ ಆಜ್ಞೆಯನ್ನು ಹೈಕೋರ್ಟ್ ರದ್ದುಪಡಿಸಿದೆ. ಸರಕಾರದ ಆಜ್ಞೆ ಬಗ್ಗೆ ಹೈಕೋರ್ಟಿನ ಮುಂದೆ ವಾದಿಸಲು ಅಡ್ವೋಕೇಟ್ ಜನರಲ್ ಅವರು ಕ್ರಮ ವಹಿಸಲಿಲ್ಲ. ಈ ಮೂಲಕ 12 ಲಕ್ಷ ಕಾರ್ಮಿಕರಿಗೆ ಸರಕಾರ ದ್ರೋಹವೆಸಗಿದೆ. ಈ ಕೂಡಲೇ ಹೈಕೋರ್ಟ್ ತೀರ್ಮಾನದ ಪ್ರಕಾರ ಕನಿಷ್ಟ ಕೂಲಿ ಸಮಿತಿ ಪುನರ್ ರಚನೆಯಗಿ ಸರಿಯಾಗಿ ಕನಿಷ್ಟ ಕೂಲಿ ನಿಗದಿಯಾಗಬೇಕು.

ವಿರೋಧ ಪಕ್ಷಗಳ ಜಂಟೀ ನೇತೃತ್ವದಲ್ಲಿ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ಪಕ್ಷದ ಎಲ್ಲಾ ಕಾರ್ಯಕರ್ತರೂ ಸಕ್ರೀಯವಾಗಿ ಪಾಲ್ಗೊಳ್ಳಬೇಕೆಂದು ಸಿ.ಪಿ.ಐ.(ಎಂ) ರಾಜ್ಯ ಸಮಿತಿ ಮನವಿ ಮಾಡಿದೆ.

ಸಂಪಾದಕೀಯ

(1ನೇ ಪುಟದಿಂದ)

ಇದರಿಂದ ವಸಾಹತುಶಾಹಿ ರಾಷ್ಟ್ರಗಳ ಜನತೆಯೂ ಸ್ಫೂರ್ತಿಗೊಂಡು ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಟವನ್ನು ತೀವ್ರಗೊಳಿಸಿ ಭಾರತವನ್ನೊಳಗೊಂಡ ಇತರ ಅನೇಕ ರಾಷ್ಟ್ರಗಳು ಸ್ವತಂತ್ರಗೊಂಡುವು. ಸಾಮ್ರಾಜ್ಯಶಾಹಿಗಳ ಶಕ್ತಿ ಕಡಿಮೆಯಾಗಿ ಪ್ರಜಾಸತ್ತಾತ್ಮಕ ಶಕ್ತಿಗಳು ಬೆಳೆದವು.

ತೀವ್ರವಾದ ಬಿಕ್ಕಟ್ಟಿನಲ್ಲಿ ಸಿಲುಕಿರುವ ಸಾಮ್ರಾಜ್ಯಶಾಹಿಗಳು ಈಗ ಕಂಗಾಲಾಗಿ ತಮ್ಮ ವ್ಯವಸ್ಥೆಯನ್ನು ಉಳಿಸಲು ಯುದ್ಧವೊಂದೇ ದಾರಿಯೆಂದು ತಿಳಿದು ಅದಕ್ಕೆ ತೀವ್ರ ಸಿದ್ಧತೆ ನಡೆಸುತ್ತಿವೆ. ಅಮೇರಿಕವು ಈ ಕೂಟದ ನಾಯಕನಾಗಿ ತನ್ನ ಅಪಾರ ಶಕ್ತಿಯನ್ನೆಲ್ಲಾ ಉಪಯೋಗಿಸಿಕೊಂಡು ಇಡೀ ಜಗತ್ತನ್ನೇ ತನ್ನ ಅಧೀನಕ್ಕೆ ತರಲು ಪಿತೂರಿ ನಡೆಸುತ್ತಿದೆ. ಸುಮಾರು 540 ಯುದ್ಧ ನೆಲೆಗಳನ್ನು ಪ್ರಪಂಚದ ಮೂಲೆ-ಮೂಲೆಗಳಲ್ಲಿ ಸ್ಥಾಪಿಸಿದೆ. ನ್ಯಾಟೊ, ಸೀಟೋ, ಮೀಡೋ ಮುಂತಾದ ಹಲವಾರು ಯುದ್ಧ ಕೂಟಗಳನ್ನು ರಚಿಸಿದೆ. ಆದರೂ ಸೋವಿಯತ್ ರಷ್ಯಾದ ನೇತೃತ್ವದಲ್ಲಿರುವ ಸಮಾಜವಾದಿ ಶಿಬಿರವನ್ನೆದುರಿಸುವ ಧೈರ್ಯ ಅದಕ್ಕಿಲ್ಲ.

ಭಾರತ-ರಷ್ಯಾ ರಾಷ್ಟ್ರಗಳ ಮಧ್ಯೆ ನಿಕಟ ಸ್ನೇಹ ಸಂಬಂಧವಿದೆ. ನಮ್ಮ ಬೆಳವಣಿಗೆಗೆ ಅವರು ಕೊಡುತ್ತಿರುವ ಅಪಾರ ಸಹಾಯವು ಸಾಮ್ರಾಜ್ಯಶಾಹಿಗಳನ್ನೆದುರಿಸಲು ನಮಗೆ ಸಹಾಯಕಾರಿಯಾಗಿದೆ. ಎಲ್ಲ ಸಂದರ್ಭಗಳಲ್ಲೂ ರಷ್ಯಾ ನಮ್ಮ ನೆರವಿಗೆ ಬಂದಿದೆಯೆಂಬುದನ್ನು ಗಮನಿಸುವುದು ಅಗತ್ಯ.

ಸಾಮ್ರಾಜ್ಯಶಾಹಿಗಳು ರಷ್ಯವನ್ನೆದುರಿಸಲು ಈಗ ಮಾಡುವ ಪ್ರಯತ್ನಗಳ ವಿರುದ್ಧ ಹೋರಾಟದಲ್ಲಿ ಜಗತ್ತಿನ /ಎಲ್ಲ ಜನತೆಯೂ ಭಾಗವಹಿಸುತ್ತದೆ. ನಾವೂ ಇದರಲ್ಲಿ ಭಾಗಿಗಳಾಗಿದ್ದೇವೆ. ರಷ್ಯ ದೇಶದಲ್ಲಾದ ಕ್ರಾಂತಿ ಆ ದೇಶದ ಕ್ರಾಂತಿಯಷ್ಟೇ ಅಲ್ಲ. ಇಡೀ ಜಗತ್ತಿನ ದುಡಿಯುವ ಜನತೆಯ ಹೋರಾಟದ ಅಂಗವಾಗಿದೆ. ಹೊಸ ಜಗತ್ತಿನ ನಿರ್ಮಾಣಕ್ಕೆ ನಾಂದಿಯಾಗಿದೆ. ಎಲ್ಲರ ಆಶೋತ್ತರಗಳನ್ನು ಪ್ರತಿಬಿಂಬಿಸುವ ಕ್ರಾಂತಿಯಾಗಿದೆ. ಸಾಮ್ರಾಜ್ಯಶಾಹಿಗಳನ್ನೆದುರಿಸಲು, ದುಡಿಯುವ ಜನತೆಗೆ ಹೋರಾಟದಲ್ಲಿ ನೇರವೀಯಲು ಧೈರ್ಯ ನೀಡುತ್ತಿರುವ ಶಕ್ತಿಯಾಗಿದೆ.

ರಷ್ಯದ ಕ್ರಾಂತಿ ಚಿರಾಯುವಾಗಲಿ !

ಭಾರತ—ರಷ್ಯಾ ಮೈತ್ರಿ ಚಿರಾಯುವಾಗಲಿ !

ಪರಿಸರ

○ ದೇಶದ ವಿದೇಶೀ ವಿನಿಮಯ ದಾಸ್ತಾನಿನ ಇಳಿಮುಖದಿಂದ ಅರ್ಥ ಖಾತೆಯ ಅಧಿಕಾರಿಗಳು ಕಳವಳಗೊಂಡಿದ್ದಾರೆಂದು ತಿಳಿದು ಬಂದಿದೆ... ಇದು ಈ ಸೆಪ್ಟೆಂಬರಿನಲ್ಲಿ ಅತ್ಯಧಿಕವಾಗಿತ್ತು. ಈ ತಿಂಗಳೊಂದರಲ್ಲಿ 368.11 ಕೋಟಿ ರೂ. ಗಳಷ್ಟು ವಿದೇಶಿ ವಿನಿಮಯ ಕಡಿಮೆಯಾಯ್ತು.

ಇ. ಎಸ್. ಎಫ್. ಅ 31

● ಖಾಸಗಿ ಕೈಗಾರಿಕಾ ರಂಗವು ಅತಿ ಅಪಾಯ ತೆರಿಗೆಯಿಂದ ಬಳಲುತ್ತಿದೆ ಎಂಬ ಟೀಕೆಯನ್ನು ಇಂದು ಕೇಂದ್ರ ಅರ್ಥಖಾತೆಯ ರಾಜ್ಯ ಮಂತ್ರಿ ಪಟ್ಟಾಭಿರಾಮರಾವ್ ತಳ್ಳಿಹಾಕಿದರು......ಹೊಸ ಕೈಗಾರಿಕೆಗಳಿಗೆ 8 ವರ್ಷ ಲಾಭದ ಮೇಲೆ ತೆರಿಗೆ ವಿನಾಯಿತಿ, ಹೊಸ ಯಂತ್ರ ಖರೀದಿ, ವೈಜ್ಞಾನಿಕ ಸಂಶೋಧನೆ, ರಫ್ತು ಅಭಿವೃದ್ಧಿ, ಗ್ರಾಮೀಣ ಅಭಿವೃದ್ಧಿ. ಮುಂತಾದುವುಗಳಿಗೆ ಕೊಡುವ ರಿಯಾಯ್ತಿಗೆ ಗಮನಕ್ಕೆ ತೆಗೆದುಕೊಂಡರೆ ತೆರಿಗೆ ಬಹಳ ಕಮ್ಮಿ. ಇದು ದೇಶದ 20 ದೊಡ್ಡ ಕೈಗಾರಿಕಾ ಗುಂಪುಗಳು 1978-80ರಲ್ಲಿ ಸಾಧಿಸಿದ ತೆರಿಗೆ ಪೂರ್ಣ ಲಾಭಗಳನ್ನು ನೋಡಿದರೆ ತಿಳಿಯುತ್ತದೆ ಎಂದರು.

— ಯು. ಎಸ್. ಐ. ನ. 1

● ನಗರದ ಕಳಾಸಿಪಾಳ್ಯ ಬಸ್ ಸ್ಟಾಂಡ್ ಪ್ರದೇಶದಲ್ಲಿ ಅಮೂಲ್ಯವಾದ 1167 ಚ. ಮೀಟರ್ ನಿವೇಶನವನ್ನು ಡಿ. ಪಿ. ಶರ್ಮ ಎಂಬುವವರಿಗೆ ಕೇವಲ 17,500 ರೂ. ವಾರ್ಷಿಕ ಗುತ್ತಿಗೆ ಮೇಲೆ ನೀಡಿರುವುದರ ಔಚಿತ್ಯವನ್ನು ಲೋಕಸಭಾ ಸದಸ್ಯ ಡಿ. ಆರ್. ಶಾಮಣ್ಣ ಅವರು ಪ್ರಶ್ನಿಸಿ ಇದು ನಗರ ಸಭೆಯ ಸೊತ್ತನ್ನು ಸೂರೆಮಾಡುವ ಕಾರ್ಯ ಎಂದು ಖಂಡಿಸಿದ್ದಾರೆ.

—ಪ್ರಜಾವಾಣಿ ಅ. 29

Printed & Published by P. Ramachandra Rao by him on behalf of the Communist Party of India (Marxist) Karnataka State Committee, L-56 K. V. Temple Street Sultanpet, Bangalore-560 053. Editorial and managerial office :L-56, K. V. Temple Street ,Sultanpet, Bangalore-560 053. Phone-24154, Prited at Ravee Traders, No. 8/1, J. M. Lane, Balepet Cross, Bangalore-560 053. EDITOR : M. K. BHAT.